# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 83 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.09.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 83 • PRGI No:KARKAN/2023/88055 • VIJAYANAGARA • 25.09.2024 • Wednesday • Page:04 • Rs:2







## ಮೈಕ್ರೋ ನ್ಯೂಸ್

### ಸೆ.29ಕ್ಕೆ ಕಾಲೇಜು ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಸ್ಪರ್ಧೆ

**ಹಂಪಿ ಟೈಮ್ಸ್ ಹೊಸಪೇಟೆ**

ಯುವಜನೋತ್ಸವ ಅಂಗವಾಗಿ ನ್ಯಾಕೋ ಮಾರ್ಗ ಸೂಚಿಯಂತೆ ಕಾಲೇಜು ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಸ್ಪರ್ಧೆಯನ್ನು ವಿಜಯನಗರ ಕಾಲೇಜಿನಲ್ಲಿ ಸೆಪ್ಟೆಂಬರ 29ರಂದು ಬೆಳಗ್ಗೆ 6.30ಕ್ಕೆ ಅಯೋಜಿಸಲಾಗಿದೆ. ರಾಜ್ಯಾದ್ಯಂತ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್.ಐ.ವಿ, ಏಡ್ಸ್ ಬಗ್ಗೆ ಅರಿವು ಮೂಡಿಸಲು 5 ಕಿಲೋ ಮೀಟರ್ ಮ್ಯಾರಥಾನ್ ಸ್ಪರ್ಧೆ ಏರ್ಪಡಿಸಲಾಗಿದ್ದು, ಅದರಂತೆ ವಿಜಯನಗರ ಜಿಲ್ಲೆಯಲ್ಲಿಯೂ ಸಹ ಮ್ಯಾರಥಾನ್ ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಆರೋಗ್ಯ, ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

### ಪ್ರವಾಸಿ ಮಾರ್ಗದರ್ಶಿ ತರಬೇತಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಲು ಆಸಕ್ತ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. ಆಸಕ್ತ ಅರ್ಹ ಅಭ್ಯರ್ಥಿಗಳು ನಗರದ >>3

# ಕೇಂದ್ರದ ಜನಪರ ಯೋಜನೆಗಳು ಸಾಮಾನ್ಯ ಪ್ರಜೆಗೂ ತಲುಪಿಸಿ

## ಶಾಸಕ ಕೃಷ್ಣನಾಯಕ ಹೇಳಿಕೆ | ವಾರ್ತಾಲಾಪ ಕಾರ್ಯಾಗಾರ

## ರೈತರಿಗೆ, ಮಹಿಳೆಯರಿಗೆ, ಯುವಕರಿಗೆ, ಉದ್ಯೋಗದ ಯೋಜನೆ



**ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ಸರ್ಕಾರದ ಯೋಜನೆಗಳು ಜನ ಸಾಮಾನ್ಯರಿಗೆ ತಲುಪಬೇಕು ಎಂದು ಹೂವಿನಹಡಗಲಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೃಷ್ಣ ನಾಯಕ ಹೇಳಿದರು.

ಭಾರತ ಸರ್ಕಾರದ ವಾರ್ತಾ ಶಾಖೆ ಬೆಂಗಳೂರು, ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೋ ಬೆಂಗಳೂರು, ವಿಜಯನಗರ ಜಿಲ್ಲಾಡಳಿತ, ತಾಲೂಕಾಡಳಿತ, ಜಿಲ್ಲಾ ಮತ್ತು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಪ್ರೆಸ್‌ಕ್ಲಬ್ ಹೂವಿನಹಡಗಲಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಹೂವಿನಹಡಗಲಿ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಶ್ರೀಮತಿ ರುದ್ರಾಂಭ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳ ಕುರಿತು ವಿಜಯನಗರ ಮತ್ತು ಹೂವಿನಹಡಗಲಿ ಜಿಲ್ಲಾ ಮತ್ತು ತಾಲೂಕು ಮಾಧ್ಯಮ ಪ್ರತಿನಿಧಿಗಳಿಗೆ ಹೂವಿನಹಡಗಲಿಯ ಶ್ರೀಮತಿ ರುದ್ರಾಂಭ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಸೆಪ್ಟಂಬರ್ 24ರಂದು ಹಮ್ಮಿಕೊಂಡಿದ್ದ ವಿಶೇಷ ಕಾರ್ಯಗಾರ ವಾರ್ತಾಲಾಪ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರವು ಬಡವರಿಗೆ, ಮಧ್ಯಮ ವರ್ಗದವರಿಗೆ, ರೈತರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಹಾಗೂ ಎಲ್ಲರ ಅಭಿವೃದ್ಧಿಗಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು, ಜನರ ಪರ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ಜಾರಿಗೆ ಅನೇಕ ಮಹತ್ವಾಕಾಂಕ್ಷೆಯ ಯೋಜನೆಗಳು ಅರ್ಹ ಜನರಿಗೆ ತಲುಪುವಂತಾಗಬೇಕು. ಸರ್ಕಾರದ ಯೋಜನೆಗಳು ಜನ ಸಾಮಾನ್ಯರಿಗೆ ಸರಿಯಾಗಿ ತಲುಪುತ್ತಿವೆಯೇ ಅಥವಾ ಇಲ್ಲ ಎಂಬುವುದನ್ನು ಮಾಧ್ಯಮಗಳ ವರದಿಗಳ ಮೂಲಕ ತಿಳಿಯುತ್ತದೆ. ಎಲ್ಲರಿಗೂ ಕೇಂದ್ರ ಸರ್ಕಾರದ ಯೋಜನೆಗಳ ಸದುಪಯೋಗ ಪಡೆಯಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರದ ಯೋಜನೆಗಳ ಕುರಿತು ಹೆಚ್ಚಿನ ಪ್ರಚಾರ ಅತ್ಯವಶ್ಯಕವಾಗಿದೆ ಎಂದರು.

ಭಾರತ ಸರ್ಕಾರದ ವಾರ್ತಾ ಶಾಖೆ (ಪಿ.ಐ.ಬಿ) ಕೇಂದ್ರ ಸಂವಹನ ಇಲಾಖೆಯ ಕರ್ನಾಟಕ ವಲಯದ ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ ಮಾತನಾಡಿ, ವಾರ್ತಾಲಾಪ ಕಾರ್ಯಕ್ರಮದ ಮೂಲಕ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಗ್ರಾಮೀಣ ಮಟ್ಟದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ವಾರ್ತಾಲಾಪ ಕಾರ್ಯಾಗಾರವನ್ನು ತಾಲ್ಲೂಕು ಹಂತದಲ್ಲಿ ಹಮ್ಮಿಕೊಂಡಿರುವುದು ಇದೆ ಮೊದಲ ಬಾರಿಗೆ ಆಗಿದೆ. ಜನ ಸಾಮಾನ್ಯರಿಗೆ, ರೈತರಿಗೆ, ಮಹಿಳೆಯರಿಗೆ, ಯುವಕರಿಗಾಗಿ ಉದ್ಯೋಗ ಸೃಷ್ಟಿಸುವಂತಹ ಯೋಜನೆಗಳನ್ನು ಕೇಂದ್ರ ಸರ್ಕಾರವು ರೂಪಿಸಿದೆ. ಈ ಎಲ್ಲ >>3

# ಸೆ.26ರಂದು ರಾಜ್ಯವ್ಯಾಪಿ ಅನಿರ್ದಿಷ್ಠಾವದಿ ಮುಷ್ಕರ



**ಹಂಪಿ ಟೈಮ್ಸ್ ಕೊಟ್ಟೂರು**

ಗ್ರಾಮ ಆಡಳಿತ ಅಧಿಕಾರಿಗಳ ವಿವಿಧ ಬೇಡಿಕೆ ಹಿಡೇರಿಕೆಗೆ ಆಗ್ರಹಿಸಿ ಸೆ.26 ರಿಂದ ಎಲ್ಲಾ ಬಗೆಯ ಮೊಬೈಲ್ ಆಪ್ಗಳನ್ನು ಹಾಗೂ ವೆಬ್ ಅಪ್ಲಿಕೇಷನ್ನಗಳನ್ನು, ಲೇಖನಿಯನ್ನು ಸ್ಥಗಿತಗೊಳಿಸುವ ಮೂಲಕ ಅನಿರ್ಧಿಷ್ಠಾವದಿ ಮುಷ್ಕರ ರಾಜ್ಯವ್ಯಾಪಿ ಹಮ್ಮಿಕೊಳ್ಳುವುದಾಗಿ ಕೊಟ್ಟೂರು ತಾಲೂಕಿನ ಗ್ರಾ.ಆ.ಅ ಸಂಘದ ಅಧ್ಯಕ್ಷೆ ಜ್ಯೋತಿಬಾಯಿ ಅನ್ನದಾನೇಶ ಬಿ ಪತ್ತಾರ್ ಉಪತಹಶೀಲ್ದಾರ್ ಅವರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು.

ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು ಸರ್ಕಾರಕ್ಕೆ ಈಗಾಗಲೇ ರಾಜ್ಯ ಮಟ್ಟದದಲ್ಲಿ ನಿರಂತರವಾಗಿ ಮನವಿಯನ್ನು ಸಲ್ಲಿಸಿದ್ದರೂ ಸಹಾ ನಮಗೆ ಸ್ಪಂದನೆ ಸಿಕ್ಕಿರುವುದಿಲ್ಲ, ಪತಿ–ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಕೋರಿಕೆ ಕೂಡಾ ಈಡೇರಿಕೆಯಾಗಿರುವುದಿಲ್ಲ. ಅಲ್ಲದೆ, 20ಕ್ಕೂ ಹೆಚ್ಚು ಸರ್ಕಾರದ ಯ್ಯಾಪ್ಗಳನ್ನು ನಮ್ಮ ಮೊಬೈಲ್ನಲ್ಲಿ ಡೌನ್ಲೋಡ್ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದೇವೆ. ಸರ್ಕಾರದಿಂದ ಮೊಬೈಲ್, ಸಿಮ್, ಲ್ಯಾಪ್ಟಾಪ್, ಪ್ರಿಂಟರ್, ಟೇಬಲ್, ಛೇರ್ ಹೀಗೆ ಯಾವುದೇ ಸಲಕರಣೆಗಳಿಲ್ಲ ಹಾಗೂ ಕಾರ್ಯನಿರ್ವಹಿಸಲು ನಮ್ಮದೇ ಆದ ಕಛೇರಿ ಸಹಾ ಇರುವುದಿಲ್ಲ ಎಂದರು.

ಪದೋನ್ನತಿಯಲ್ಲೂ ಸಹಾ ವಂಚಿತರಾಗುತ್ತಿದ್ದೇವೆ. ಕೆಸಿಎಸ್ಆರ್ ನಿಯಮಾವಳಿಗಳಂತೆ ಸರ್ಕಾರಿ ರಜಾ ದಿನಗಳಲ್ಲಿ ಕರ್ತವ್ಯಕ್ಕೆ ಮೆಮೋ ಹಾಕಬಾರದು. ಪ್ರಯಾಣ ಭತ್ಯೆ ರೂ.500 ರಿಂದ 3000ಕ್ಕೆ ಏರಿಕೆ ಮಾಡಬೇಕು. ಹಾಗೂ ಇತರೆ ನಮ್ಮ ಬೇಡಿಕೆಗಳು ನ್ಯಾಯಯುತವಾಗಿರುವ ಕಾರಣ ಕೂಡಲೇ ಸರ್ಕಾರ ಈಡೇರಿಸುವಂತೆ ಒತ್ತಾಯಿಸಿದರು.

ಈ ವೇಳೆ ತಾಲೂಕು ಗೌರವ ಅಧ್ಯಕ್ಷರು ಶರಣಬಸವೇಶ, ಖಜಾಂಚಿ ಮಲ್ಲೇಶ, ಸಂಘಟನಾ ಕಾರ್ಯದರ್ಶಿ– ರಮೇಶ್, ಶಾರದ ಕೋಗಳಿ, ಸಹ ಕಾರ್ಯದರ್ಶಿ ಸಿದ್ದೇಶ್, ಶಿರಸ್ತೇದಾರರಾದ ರೇಖಾ.ಎಸ್. ಕಂದಾಯ ನಿರೀಕ್ಷಕರಾದ ಹಾಲಸ್ವಾಮಿ, ಡಿ ಶಿವಕುಮಾರ, ಸಿಬ್ಬಂದಿ ಎಸ್ ಎಂ ಗುರುಬಸವರಾಜರಾಜ ಹಾಗೂ ಇತರರು ಇದ್ದರು.




# ಬಿಜೆಪಿ ಜೆಡಿಎಸ್ ಪ್ರಯತ್ನಕ್ಕೆ ಸೋಲು ಖಚಿತ ಪಿತೂರಿಗೆ ನಾನು ಹೆದರುವ ಪ್ರಶ್ನೆಯೇ ಇಲ್ಲ: ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಬೆಂಗಳೂರು**

ಕಾಂಗ್ರೆಸ್ ಸರ್ಕಾರವನ್ನು ಅಭದ್ರಗೊಳಿಸಿ, ಹಾಗೂ ನನಗೆ ಕಪ್ಪು ಮಸಿ ಬಳಿಯಲು ಬಿಜೆಪಿ ಜೆಡಿಎಸ್ ನಡೆಸುತ್ತಿರುವ ಪ್ರಯತ್ನಕ್ಕೆ ಸೋಲು ಖಚಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಂದು ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಆದೇಶ ಹೊರಬಂದ ನಂತರ ಪತ್ರಿಕಾ ಗೋಷ್ಠಿ ನಡೆಸಿ, ತಮ್ಮ ಮೊದಲ ಪ್ರತಿಕ್ರಿಯೆ ನೀಡಿದರು.

ಕಾನೂನು ತಜ್ಞರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಿಎನ್ ಎಸ್ ಎಸ್ ಪ್ರಕಾರ 218 ಹಾಗೂ ಪಿಸಿ ಕಾಯ್ದೆ 19ರಂತೆ ತನಿಖೆಗೆ ಅನುಮತಿ ನೀಡುವುದನ್ನು ತಿರಸ್ಕರಿಸಿ, ಪಿಸಿ ಕಾಯ್ದೆಯ 17 ಎ ಪ್ರಕಾರ ತನಿಖೆಗೆ ಉಚ್ಚನ್ಯಾಯಾಲಯ ಆದೇಶ ನೀಡಿದೆ. ಈ ತೀರ್ಪಿನ ಮೇಲೆ ಕಾನೂನು ಹೋರಾಟದ ಬಗ್ಗೆ ತಜ್ಞರೊಂದಿಗೆ ಚರ್ಚೆ ಮಾಡಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದರು. ಬಿಜೆಪಿ ಜೆಡಿಎಸ್ ನ ಪಿತೂರಿಗೆ ಹೆದರುವುದಿಲ್ಲ ಬಿಜೆಪಿ ಜೆಡಿಎಸ್ ನ ಪಿತೂರಿಗೆ ನಾನು ಎಂದೂ ಹೆದರುವುದಿಲ್ಲ. ಬಿಜೆಪಿ ಜೆಡಿಎಸ್ ಸಂಚು, ರಾಜಭವನ ದುರುಪಯೋಗ ಹಾಗೂ ದುರ್ಬಳಕೆಗೆ ನಾನು ಹೆದರುವುದಿಲ್ಲ. ರಾಜ್ಯದ ಜನ, ಪಕ್ಷದ ಹೈಕಮಾಂಡ್, ಶಾಸಕರು, ಸಚಿವರು, ಕಾರ್ಯಕರ್ತರು ನನ್ನೊಂದಿಗಿದ್ದಾರೆ. ಕಾನೂನು ಹೋರಾಟಕ್ಕೆ ಹೈಕಮಾಂಡ್ ಸಹಕಾರ ನೀಡಲಿದೆ. ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರ, ಕೇವಲ ನನ್ನ ಮೇಲಷ್ಟೇ ಅಲ್ಲ, ಇಡೀ ದೇಶದ ವಿರೋಧಪಕ್ಷಗಳ ವಿರುದ್ಧ ಮೇಲೆ ಸೇಡಿನ ರಾಜಕೀಯ ಮಾಡುತ್ತಿದ್ದಾರೆ. ಮಾಡುತ್ತಿದ್ದಾರೆ ಎಂದರು.

ಬಿಜೆಪಿಯವರು ಸಾಮಾಜಿಕ ನ್ಯಾಯ, ಬಡವರ ವಿರೋಧಿಗಳು ಕಾಂಗ್ರೆಸ್ ಸರ್ಕಾರದ ಬಡವರ ಪರ ಕಾರ್ಯಕ್ರಮಗಳನ್ನು ಬಿಜೆಪಿ ವಿರೋಧಿಸುತ್ತಾ ಬಂದಿದ್ದಾರೆ. ಶೂಭಾಗ್ಯ, ಪಶುಭಾಗ್ಯ, ಶಾದಿಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಹಲವು ಜನಪರ ಯೋಜನೆಗಳು ಹಾಗೂ ಈಗಿನ ಗ್ಯಾರಂಟಿ ಯೋಜನೆಗಳನ್ನು ಸಹ ವಿರೋಧಿಸುತ್ತಿದ್ದಾರೆ. ಹೈಕೋರ್ಟ್ ಆದೇಶದ ಪ್ರತಿಯನ್ನು ಸಂಪೂರ್ಣ ಪರಿಶೀಲಿಸಿ, ಮುಂದಿನ ಪ್ರತಿಕ್ರಿಯೆಯನ್ನು ನೀಡುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು, ಇಡೀ ದೇಶದಲ್ಲಿ ಪಿತೂರಿ ಮಾಡಿದಂತೆ ಕರ್ನಾಟಕ ದಲ್ಲಿಯೂ ನನ್ನ ಹಾಗೂ ಸರ್ಕಾರದ ವಿರುದ್ಧ ಪಿತೂರಿ ಮಾಡಲಾಗಿದೆ ಎಂದರು.

**ಕಾನೂನಾತ್ಮಕ ಹೋರಾಟ:** ಆದೇಶ ತೃಪ್ತಿ ತಂದಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿ, ಇದೊಂದು ಕಾನೂನಾತ್ಮಕ ಹೋರಾಟ. ಈ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ ಪ್ರತಿಕ್ರಿಯೆ ನೀಡುವುದಾಗಿ ಹೇಳಿದರು. ತಪ್ಪು ಮಾಡಿಲ್ಲ ನನ್ನ ಪ್ರಕಾರ ನಾನು ತಪ್ಪು ಮಾಡಿಲ್ಲ. 17 ಎ ರಡಿ ತನಿಖೆ ಮಾಡಲು ಆದೇಶ ನೀಡಿದ ಮಾತ್ರಕ್ಕೆ ನಾನು ತಪ್ಪು ಮಾಡಿದ್ದೇನೆ ಎಂದಲ್ಲ. ಬಿ ಎನ್.ಎಸ್.ಎಸ್ ಕಾಯ್ದೆಯಡಿ 218 ಆದೇಶ ಮಾಡಿಲ್ಲ ಎಂದರು.

ಸಚಿವ ಕುಮಾರಸ್ವಾಮಿಯವರಿಗೆ ಅನ್ವಯವಾಗುವುದಿಲವೇ ಬಿಜೆಪಿಯವರು ಮುಖ್ಯಮಂತ್ರಿಗಳು ರಾಜಿನಾಮೆ ಕೊಡಲು ಒತ್ತಾಯಿಸಿ ಪ್ರತಿಭಟನೆ ಮಾಡುತ್ತಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ ಅವರನ್ನು ನಾವು ಎದುರಿಸುತ್ತೇವೆ. ರಾಜಿನಾಮೆ ಏಕೆ ಕೊಡಬೇಕು ಎಂದು ಪ್ರಶ್ನಿಸಿದರು. ನ್ಯಾಯಾಲಯದ ತೀರ್ಪನ್ನು ನಾನು ಪೂರ್ತಿ ಓದಿಲ್ಲ. ಮಾಧ್ಯಮಗಳಲ್ಲಿ ಬಿತ್ತರಿಸಿರುವುದನ್ನು ಮಾತ್ರ ಓದಿದ್ದೇನೆ ಎಂದರು. ಓದಿದ ನಂತರ ಪುನಃ ಪ್ರತಿಕ್ರಿಯೆ ನೀಡುತ್ತೇನೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ವೃತ್ತಿ ಜೀವನದಲ್ಲಿ ಮಹಿಳೆಯ ಅಭದ್ರತೆಗಳು

## ಮಕ್ಕಳಿಗೆ ಬೇಕಿದೆ ಮಾನವೀಯತೆ ಶಿಕ್ಷಣ । ಹೆಣ್ಣನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ



ಮಾನವ ಜನಾಂಗದ ಸೃಷ್ಟಿ ಹಾಗೂ ಅದರ ಸುಸ್ಥಿರಗತಿ ಪ್ರಕ್ರಿಯೆಯ ಕೇಂದ್ರ ಧಾತು ಮಹಿಳೆ. ಆದರೆ ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಸಾಮಾಜಿಕ ಜೀವನದ ಪ್ರಧಾನ ಧಾರೆಯಲ್ಲಿ ಆಕೆ ಅಂಚಿಗೆ ನೂಕಲ್ಪಟ್ಟಿದ್ದಾಳೆ. ಅಸಮಾನತೆ, ಶ್ರೇಣೀಕರಣ ಹಾಗೂ ಪುರುಷಶಾಹಿ ಸಮಾಜಗಳಲ್ಲಿ ಇಂತಹ ಲಿಂಗಸಂಬಂಧಿ ಅಸಮಾನತೆಗಳು ಹೆಚ್ಚು ಸ್ಪಷ್ಟ ರೂಪದಲ್ಲಿ ಗೋಚರಿಸುತ್ತವೆ. ಈ ಎಲ್ಲ ಗುಣಗಳಿಂದ ಕೂಡಿರುವ ಭಾರತದಲ್ಲಿ ಅನೂಚನವಾಗಿ ಹರಿದುಕೊಂಡು ಬರುತ್ತಿರುವ ಹಾಗೂ ಆಳವಾಗಿ ಬೇರು ಬಿಟ್ಟಿರುವ ಸಾಮಾಜಿಕ–ಆರ್ಥಿಕ ಅಸಮಾನತೆಯಿಂದ ಕೂಡಿರುವ ವ್ಯವಸ್ಥೆಯಲ್ಲಿ ಮಹಿಳೆಯರು ತೀವ್ರ ನೋವು ಅನುಭವಿಸುತ್ತಿದ್ದಾರೆ. ವೃತ್ತಿ ಜೀವನದಲ್ಲಿ ಮಹಿಳೆಯ ಸ್ಥಾನ ಮಾನಗಳು ಸಮಾಜದಲ್ಲಿ ಈಗಲೂ ನಿಕೃಷ್ಟವಾಗಿ ನಡೆಸಿಕೊಳ್ಳುವುತ್ತಿರುವುದು ಇದೆ ಅದು ದಿನನಿತ್ಯ ಪತ್ರಿಕೆಗಳಲ್ಲಿ, ಮಾಧ್ಯಮದಲ್ಲಿ ನಾವೆಲ್ಲರೂ ನೋಡುತ್ತಿದ್ದವೆ.

ಕೊಲ್ಕತ್‌ದಲ್ಲಿ ನೆಡೆದ ವೈದ್ಯೆಯ ಕೊಲೆ ಮತ್ತು ಆತ್ಯಾಚಾರ ನಮ್ಮ ಸಮಾಜದ ಒಂದು ಘೋರ ಕೃತ್ಯ, ಕೆಲಸದ ಸಮಯದಲ್ಲಿ ಈ ರೀತಿ ಘಟನೆ ನಡೆದಿದೆ ಹಾಗೂ ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯ ಮೇಲೆ ಆದಂತಹ ದುರಂತ ಘಟನೆಗಳು, ಹೀಗೆ ಹೇಳಿದಂತೆ ಪಟ್ಟಿ ಬೇಳೆಯುತ್ತಾ ಹೋಗುತ್ತದೆ. ಆದರೆ ಇವುಗಳ ಮುಂಚೆ ನಾವು ಸಾಮಾನ್ಯ ವಿಷಯ ತಿಳಿಯಬೇಕಾಗಿರುವುದು ಕೆಲಸ ಮಾಡುವ ಹೆಣ್ಣು ಮಕ್ಕಳ ಪರಿಸ್ಥಿತಿ ಮತ್ತು ಅವರ ಅಭದ್ರತೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಹೆಣ್ಣುಮಕ್ಕಳು ತಾವು ಮಾಡುವ ಕೆಲಸದ ಜಾಗದಲ್ಲಿ ಒಂದು ಭದ್ರತೆ ವಾತವರಣ ಬೇಕಾಗುತ್ತದೆ. ಆದರೆ ಅದು ಹಿಂದಿನಕಾಲದಿಂದ ಅಂದರೆ ಬಸವಣ್ಣನ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ ಅನುಭವಿಸಿದ ನಿಂದನೆಗಳನ್ನು ಮೆಟ್ಟಿ ನಿಲ್ಲುತ್ತಾಳೆ ಮತ್ತು ಅನುಭವ ಮಂಟಪದಲ್ಲಿ ಸ್ಥಾನ ಪಡೆಯಲು ಪಟ್ಟಂತಹ ಕಷ್ಟ ನಾವು ಓದಿದ್ದೇವೆ ಮತ್ತು ಕೇಳಿದ್ದೆವೆ ಆದೇ ರೀತಿ ಈಗಿನ ವರ್ತಮಾನದ ಕಾಲದಲ್ಲಿ ಹೆಣ್ಣುಮಕ್ಕಳ ಅಭದ್ರತೆ ಹೆಚ್ಚಾಗಿದೆ ಹೊರೆತು ಕಡಿಮೆ ಆಗಿಲ್ಲ. ಗುರುವಾರದ ಅಂಕಣ ಬರಹದಲ್ಲಿ ಸಬಿತಾ ಬನ್ನಾಡಿ ಮೇಡಂ ಅವರು ಒಂದು ಘಟನೆಯನ್ನು ಪ್ರಸ್ತಾಪಿಸುತ್ತಾರೆ, ಅದೊಂದು ಕಛೇರಿ, ರಾತ್ರಿ ಎರಡು ಗಂಟೆಯ ತನಕವೂ ಕೆಲಸದ ಒತ್ತಡದಲ್ಲಿರುವ ಮೂವರು ಗಂಡಸರು, ಇಬ್ಬರು ಹೆಂಗಸರಿದ್ದಾರೆ. ಈ ನಡುವೆ ಒಬ್ಬಾಕೆಗೆ ಪೀರಿಯಡ್ಸ್ ಕಾಣಿಸಿಕೊಂಡು, ಅವಳು ಅದನ್ನು ಜೋರಾಗಿ ಹೇಳಿದಾಗ ಇನ್ನೊಬ್ಬಳು ಮುಜುಗರಕ್ಕೆ ಒಳಗಾಗುತ್ತಾಳೆ. ಒಬ್ಬ ತಮಾಷೆಯಾಗಿ ನಗುತ್ತಾನೆ. ಅವಳು ಪ್ರತಿಭಟಿಸಿ ವಾಷ್‌ರೂಮಿಗೆ ಹೋಗುತ್ತಾಳೆ. ವಾಪಸ್ ಬಂದಾಗ, ತಮಾಷೆ ಮಾಡಿದವನೇ ಸಮಾಧಾನ ಮಾಡುತ್ತಾನೆ. ಇನ್ನೊಬ್ಬ 'ಪೇನ್‌ಕಿಲ್ಲರ್ ತಂದುಕೊಡಲೇ' ಎನ್ನುತ್ತಾನೆ. ಮತ್ತೊಬ್ಬ 'ಚಿಕ್ಕವನಿದ್ದಾಗಿನಿಂದಲೂ ಅಮ್ಮನಿಗೆ ಸ್ಯಾನಿಟರಿ ಪ್ಯಾಡ್ ತಂದು ಕೊಡುತ್ತಿದ್ದುದು' ಎಂದಾಗ, ಎಲ್ಲರೂ ನಿರುಮ್ಮಳವಾಗಿ ನಗುತ್ತಾ ತಮ್ಮ ತಮ್ಮ ಕೆಲಸ ಮುಂದುವರೆಸುತ್ತಾರೆ. ಇದು 'ವೆಲ್‌ಕಮ್ ರೆಡ್ ಮೈ ಪಿರಿಯಡ್ಸ್' ಎಂಬ ಹಿಂದಿ ಕಿರುಚಿತ್ರದಲ್ಲಿನ ದೃಶ್ಯ ಇಂತಹ ಸೇಫ್ ಆ ವಾತವರಣ ನಮ್ಮೆಲ್ಲರ ಕನಸು.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ

Scan For Digital Colourful
HAMPI TIMES E-paper

ಇನ್ನೊಂದು ಘಟನೆ ಒಂದು ಶಾಲೆಯಲ್ಲಿ ಐದು ಜನ ಶಿಕ್ಷಕರು ಒಬ್ಬರು ಶಿಕ್ಷಕಿ ಕೆಲಸ ಮಾಡುತ್ತಿರುತ್ತಾರೆ, ಆ ಶಾಲೆ ಊರಿಂದ ಆಚೆ ಇರುತ್ತದೆ. ಅಲ್ಲಿ ಒಂದೇ ಒಂದು ಟೀ ಅಂಗಡಿ ಇತ್ತು ಅಲ್ಲಿಗೆ ಬಿಡುವಿನ ಸಮಯ ದಲ್ಲಿ ಎಲ್ಲರೂ ಶಿಕ್ಷಕರ ಜೊತೆ ಆ ಶಿಕ್ಷಕಿ ಟೀ ಕುಡಿಯಲು ದಿನ ಅಲ್ಲಿಗೆ ಹೋಗುತ್ತಿದ್ದಳು. ಅಲ್ಲಿ ಎಲ್ಲರೂ ನಕ್ಕು ಮಾತಾಡಿ ಬರುತ್ತಿದ್ದರು. ಆದರೆ ಇದನ್ನು ಕಂಡ ಊರಿನ ಜನ ಆ ಶಿಕ್ಷಕಿಯ ಬಗ್ಗೆ ಆವಾಚ್ಯ ಪದಗಳನ್ನು ಬಳಸಿ ಮಾತನಾಡಲು ಶುರು ಮಾಡುತ್ತಾರೆ, ಇದನ್ನು ಕಂಡ ಮುಖ್ಯೋಪಾಧ್ಯಾಯರು ಆ ಶಿಕ್ಷಕಿಯನ್ನು ಕರೆಸಿ ನಿಮಗೆ ಟೀ ಅಂಗಡಿಗೆ ಎಲ್ಲಾರ ಜೊತೆ ಹೋಗುವುದು ತಪ್ಪು ಎನ್ನುವ ರೀತಿಯಲ್ಲಿ ಮಾತಾಡುತ್ತಾರೆ. ಐದು ಜನ ಗಂಡಸರ ಜೊತೆ ಒಬ್ಬ ಹೆಂಗಸು ಟೀ ಕುಡಿಯೋಕೆ ಹೋಗೋದು ಮಹಾ ಅಪರಾಧ ಮಾಡಿರುವ ಹಾಗೆ ಒಬ್ಬ ಶಿಕ್ಷಕಿಯ ಜೊತೆ ಕೀಳಾಗಿ ವರ್ತಿಸುವ ರೀತಿ ಅವರ ಮನೋಗುಣವನ್ನು ತೋರಿಸುತ್ತದೆ. ಶಾಲೆಯಲ್ಲಿ ಸಹಕರಿಸಬೇಕಾದ ಮುಖ್ಯೋಪಾದ್ಯಯರೇ ಅವರನ್ನು ಹಿಯಾಳಿಸಿದರೆ ಅವರಿಗೆ ಭದ್ರತೆ ಕೊಡುವವರು ಯಾರು. ಇದನ್ನು ನಾವು ಖಂಡಿಸಬೇಕಿದೆ ಆದರೂ ಎಲ್ಲಾ ತಲೆ ತಗ್ಗಿಸಿ ಯಾಕೆ ಒಪ್ಪಿಕೊಳ್ಳುತ್ತಿದ್ದವೆ. ಹೆಣ್ಣು ದುರ್ಬಲಳು ಎಂದು ಅಚ್ಚೊತ್ತಾಗಿರುವ ಕಾರಣಕ್ಕೆ ಸಹಿಸಿಕೊಳ್ಳುತ್ತಿದ್ದವೆ ನಾ?. ಹೆಣ್ಣು ಮಕ್ಕಳಿಗೆ ಕೆಲಸದ ವೇಳೆ ಆಕಸ್ಮಾತ್ ಎನೋ ತುರ್ತು ಪರಿಸ್ಥಿತಿ ಬಂದರೆ ಪುರುಷ ಸಹೋದ್ಯೋಗಿಯ ಜೊತೆ ಗಾಡಿಯ ಮೇಲೆ ಹೋದರು ತಪ್ಪನ್ನು ಹುಡುಕುವ ಸಹೋದ್ಯೋಗಿಗಳು ಈಗಲೂ ನಮ್ಮಲ್ಲಿ ಇದ್ದಾರೆ. ನಮ್ಮ ಸಮಾಜದಲ್ಲಿ ಈ ಸಂಗತಿಗಳು ದಿನ ನಿತ್ಯ ನಡೆಯುತ್ತಿದ್ದರು ಹೆಣ್ಣು ಮಕ್ಕಳು ಯಾಕೆ ಪ್ರತಿಭಟಿಸುವುದಿಲ್ಲ. ದೌರ್ಜನ್ಯವನ್ನು ಎಲ್ಲಿವರೆಗೂ ಸಹಿಸಿಕೊಳ್ಳುತ್ತಿವೆ ಅಲ್ಲಿಯವರೆಗೂ ನಡೆಯುತ್ತಲೆ ಇರುತ್ತವೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ನಿಂದಿಸುವುದೇ ತಮ್ಮ ದಿನ ನಿತ್ಯದ ಕಾಯಕವಾಗಿ ಬಿಟ್ಟಿದೆ.

ಹೆಣ್ಣುಮಕ್ಕಳು ಮನೆಯಿಂದ ಹೊರೆಗೆ ಬಂದು ಕೆಲಸ ಮಾಡುವುದು ಅನಿವಾರ್ಯನೋ ಇಲ್ಲ ಅವರ ಇಚ್ಚೆಯೋ ಹೀಗೆ ಬೇರೆ ಬೇರೆ ಕಾರಣಗಳಿಂದ ಬಂದು ದುಡಿದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ನಿವಾರಣೆ ಮಾಡಿಕೊಳ್ಳಲು ಬಂದಿರುತ್ತಾರೆ. ಅದನ್ನು ಈ ಪುರುಷ ಪ್ರಧಾನ ಸಮಾಜ ಒಪ್ಪಿಕೊಂಡು ಸಹಕರಿಸಬೇಕಿದೆ. ಹೆಣ್ಣುಮಕ್ಕಳು ಎಂದರೆ ತುಂಬಾ ಹಗುರಾವಾಗಿ ಎನು ಮಾತಾಡಿದರು ನಡೆಯುತ್ತೆ ಎನ್ನುವ ಭಾವನೆ ಕಡಿಮೆಯಾಗಬೇಕು. ಕುಂತರೆ ನಿಂತರೆ ತಪ್ಪುಗಳನ್ನು ಹುಡುಕುವುದು, ಗಾಸಿಪ್ ಸುದ್ಧಿಗಳನ್ನು ಹರಡಿಸುವುದು ಬಿಡಬೇಕು. ಹೆಣ್ಣನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಆದರೆ ಈ ತಪ್ಪನ್ನು ತುಂಬಾ ವಿದ್ಯಾವಂತರೆ ಮಾಡುತ್ತಾರೆ. ಈ ತಪ್ಪುಗಳನ್ನು ತಿದ್ದಬೇಕಾಗಿರುವುದು ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ನಾವು ನಮ್ಮ ಮಕ್ಕಳಿಗೆ ಚಿಕ್ಕವರಿದ್ದಾಗಲೇ ಹೆಣ್ಣನ್ನು ಗೌರವಿಸುವ ರೀತಿಯನ್ನು ಕಲಿಸೋಣ. ಮನೆಗೆ ತಡವಾಗಿ ಬಂದ ಹೆಣ್ಣಮಕ್ಕಳನ್ನು ಮಾತ್ರ ಪ್ರಶ್ನೆ ಮಾಡದೆ ಗಂಡು ಮಕ್ಕಳನ್ನು ಪ್ರಶ್ನೆ ಮಾಡೋಣ. ಕತ್ತಲಾಗುವ ಮುಂಚೆ ಮನೆಗೆ ಬನ್ನಿ ಎಂದು ತಾಕೀತು ಮಾಡಬೇಕಾಗಿದೆ. ಇಂತಹ ನಿಲುವು ಪ್ರತಿ ಮನೆಯಲ್ಲೂ ಬಾಲ್ಯದಿಂದಲೇ ರವಾನೆಯಾದರೆ ಮಾತ್ರ ವಿಪರೀತಕ್ಕೆ ಹೋಗಿರುವ ಇಂದಿನ ಹೊಲಸು ಮಾತು, ವರ್ತನೆ, ಮನಃಸ್ಥಿತಿಗಳು ಬದಲಾಗುವುದು, ಆತ್ಯಾಚಾರಗಳು ನಿಲ್ಲುವುದು. ಮತ್ತೆ ಶಾಲೆಯಲ್ಲಿ ಶಿಕ್ಷಕರಾದವರು ಮಕ್ಕಳಿಗೆ ಮೊದಲು ಕಲಿಸಬೇಕಾಗಿರುವುದು 'ಮಾನವೀಯತೆ', ಶಿಕ್ಷಣ ಪಡೆದವರು ರಕ್ಕಸರು, ಮನೋರೋಗಿಗಳು, ವಿದ್ಯಾವಂತ ವಿಕೃತರು, ವಿಘ್ನ ಸಂತೋಷಿಗಳು ಆಗದಿರಲಿ, ಓದು, ವ್ಯಾಕರಣ, ಚರಿತ್ರೆಯ ಕಂಠಪಾಠ, ಗಣಿತ ಸೂತ್ರಗಳಿಗಿಂತ ಮುಖ್ಯವಾಗಿ ಪ್ರತಿಯೊಬ್ಬ ವಿದ್ಯಾರ್ಥಿ ಇತರರ ಮತ್ತು ಹೆಣ್ಣುಮಕ್ಕಳ ಬಗ್ಗೆ ಕರುಣೆ ಉಳ್ಳಂತಹ ಮನುಷ್ಯರಾಗುವಂತೆ ರೂಪಿಸಬೇಕಿದೆ.

# ಸ್ನೇಹದಲ್ಲಿ ಅಸೂಯೆಗೆ ಜಾಗವಿಲ್ಲ

## ಸ್ಪರ್ಧೆಯಲ್ಲಿ ನೀವು ಭಾಗವಹಿಸಿ ಗೆಲ್ಲಲು ಸಾಧ್ಯವಾಗದಿದ್ದರೆ ನಿಮ್ಮ ಮುಂದಿರುವ ವ್ಯಕ್ತಿಯನ್ನು ಪ್ರೋತ್ಸಾಹಿಸಿ ಜಯಕ್ಕೆ ಕಾರಣರಾಗಿ

1896 ರ ಸಮಯ. ಎಲೆಕ್ಟ್ರಿಕ್ ಬಲ್ಬನ್ನು ಕಂಡುಹಿಡಿದ ಥಾಮಸ್ ಅಲ್ವಾ ಎಡಿಸನ್ ಕಂಪನಿಯೊಂದರ ಕಾರು ತಯಾರಿಕೆಯ ವಿನ್ಯಾಸ ಕಾರ್ಯದಲ್ಲಿ ನಿರತನಾಗಿದ್ದ. ಅದೇ ಸಮಯದಲ್ಲಿ ಯುವಕನೊಬ್ಬ ಅದೇ ಕಂಪನಿಯಲ್ಲಿದ್ದು ತನ್ನದೇ ಆದ ಗ್ಯಾಸೋಲಿನ್ ನಿಂದ ನಡೆಸಬಲ್ಲ ಕಾರನ್ನು ತಯಾರಿಸುತ್ತಿದ್ದುದು ಎಡಿಸನ್ನನ ಕಿವಿಗೆ ಬಿತ್ತು. ನ್ಯೂಯಾರ್ಕ್‌ನಲ್ಲಿ ನಡೆದ ಕಂಪನಿಯ ಮೀಟಿಂಗ್ ನಲ್ಲಿ ಆತನನ್ನು ಭೇಟಿಯಾದ ಥಾಮಸ್ ಅಲ್ವಾ ಎಡಿಸನ್ ಆತನ ಕಾರ್ಯವನ್ನು ಶ್ಲಾಘಿಸಿ ಪ್ರಯತ್ನವನ್ನು ಮುಂದುವರಿಸುವಂತೆ ಹೇಳಿದರು.


ವಿದ್ಯುತ್ ಶಕ್ತಿಯನ್ನು ಶಕ್ತಿಯ ಏಕೈಕ ಮೂಲ ಎಂದು ಭಾವಿಸುತ್ತಿದ್ದ ಎಡಿಸನ್ ಆ ಯುವಕನನ್ನು ಕುರಿತು "ನಿನ್ನ ಕಾರ್ಯ ಪ್ರಭಾವ ಶಾಲಿಯಾಗಿದ್ದು ನೀನು ಖಂಡಿತವಾಗಿಯೂ ಜಯಗಳಿಸುವೆ... ಪಟ್ಟು ಬಿಡದೆ ನಿನ್ನ ಕೆಲಸವನ್ನು ನಿರ್ವಹಿಸು" ಎಂದು ಕಿವಿಮಾತು ಹೇಳಿದರು. ಹಾಗೆ ಎಡಿಸನ್ ರಿಂದ ಹೇಳಿಸಿಕೊಂಡ ವ್ಯಕ್ತಿಯೇ ಖ್ಯಾತ ಕಾರು ತಯಾರಿಕಾ ಕಂಪನಿ ಫೋರ್ಡ್‌ನ ಮಾಲೀಕ ಹೆನ್ರಿ ಫೋರ್ಡ್.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ವಿಜ್ಞಾನಿ ಎಡಿಸನ್ ರ ಶ್ಲಾಘನೆಯಿಂದ ಉತ್ತೇಜಿತನಾದ ಹೆನ್ರಿ ಫೋರ್ಡ್ ತನ್ನ ಕಾರ್ಯವನ್ನು ಮುಂದುವರಿಸಿ ಕಾರು ತಯಾರಿಕಾ ಕ್ಷೇತ್ರದಲ್ಲಿ ಹೊಸದೊಂದು ಆವಿಷ್ಕಾರ 'ವನ್ನು ಸೃಷ್ಟಿಸಿದನು. ಅದು ಹೆಚ್ಚು ಜನಪ್ರಿಯವಾಗಿ ಆ ಕಾರನ್ನು ಖರೀದಿಸುವವರ ಸಂಖ್ಯೆ ಹೆಚ್ಚಾಗಿ ಹೆನ್ರಿಫೋರ್ಡ್‌ನ್ನು ಕೆಲವೇ ವರ್ಷಗಳಲ್ಲಿ ದೇಶದ ಅತ್ಯಂತ ಶ್ರೀಮಂತ ಉದ್ಯಮಿಗಳ ಸಾಲಿನಲ್ಲಿ ನಿಲ್ಲಿಸಿತು.



ಮುಂದೆ 1914 ಡಿಸೆಂಬರ್ 9ರಂದು ಎಡಿಸನ್ ನ ಸಂಶೋಧನಾ ಪ್ರಯೋಗಾಲಯ ಮತ್ತು ಫ್ಯಾಕ್ಟರಿಗೆ ಬೆಂಕಿ ಬಿದ್ದು ಎಲ್ಲವೂ ಸುಟ್ಟು ಹೋಯಿತು. ಇನ್ಶೂರೆನ್ಸ್ ನಿಂದ ಬಂದ ಹಣ ಕೂಡ ಅಗ್ನಿ ಅಪಘಾತದಿಂದ ಉಂಟಾದ ನಷ್ಟವನ್ನು ಭರಿಸಲು ಸಾಧ್ಯವಾಗದಾಗಿತ್ತು. ಅಗ್ನಿ ಅಪಘಾತದ ಅವಶೇಷಗಳು ತಣ್ಣಗಾಗುವ ಮುನ್ನವೇ ಅಲ್ಲಿಗೆ ಧಾವಿಸಿ ಬಂದ ಹೆನ್ರಿ ಫೋರ್ಡ್ 750,000 ಡಾಲರ್ ಮೊತ್ತವನ್ನು ದಾಖಲಿಸಿದ್ದ ಚೆಕ್ ಒಂದನ್ನು ಇನ್ನೂ ಹೆಚ್ಚು ಬೇಕಾದರೆ ಕೊಡಲು ಸಿದ್ದ ಎಂಬ ಪತ್ರವನ್ನೂ 67ರ ವೃದ್ಧ ಎಡಿಸನ್ ಗೆ ತಲುಪಿಸಿದ್ದನು.

ಮುಂದೆ 1916ರಲ್ಲಿ ಎಡಿಸನ್ ಮನೆಯ ಪಕ್ಕದ ಮನೆಗೆ ಬಂದು ವಾಸಿಸಿದ ಹೆನ್ರಿ ಫೋರ್ಡ್. ವಯೋಸಹಜ ತೊಂದರೆಗಳಿಂದ ಎಡಿಸನ್ ವೀಲ್ ಚೇರ್ ಬಳಸಲಾರಂಭಿಸಿದ. ಅದೇ ಸಮಯಕ್ಕೆ ಹೆನ್ರಿ ಫೋರ್ಡ್ ಕೂಡ ವೀಲ್ ಚೇರ್ ಬಳಸುವಂತಹ ಪರಿಸ್ಥಿತಿ ಬಂದೊದಗಿತು.

ಶ್ರೇಷ್ಠ ವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್, ಹೆನ್ರಿ ಫೋರ್ಡ್ ನ ಕಾರ್ಯವನ್ನು ಪ್ರೋತ್ಸಾಹಿಸಿ ಆತನ ಆತ್ಮಬಲವನ್ನು ಹೆಚ್ಚಿಸಿದರೆ 67ರ ಇಳಿ ವಯಸಿನಲ್ಲಿ ತಮ್ಮೆಲ್ಲ ಸಂಶೋಧನೆಯ ಪರಿಣಾಮಗಳನ್ನು ಕಳೆದುಕೊಂಡ ಎಡಿಸನ್ ಗೆ ಹೆನ್ರಿ ಫೋರ್ಡ್ ಆರ್ಥಿಕ ಬೆಂಬಲ ನೀಡಿದರು.

ಈ ಕಥೆ ನಮಗೆ ಕಲಿಸುವ ಪಾಠ ಮಹತ್ತರವಾದದ್ದು.. ಬೇರೊಬ್ಬರ ಪ್ರಗತಿಯನ್ನು ಕಂಡು ಎಂದೂ ಅಸೂಯೆ ಪಡಬಾರದು. ಸ್ಪರ್ಧೆಯಲ್ಲಿ ನೀವು ಭಾಗವಹಿಸಿ ಗೆಲ್ಲಲು ಸಾಧ್ಯವಾಗದಿದ್ದರೆ ಬೇಡ ನಿಮ್ಮ ಮುಂದಿರುವ ವ್ಯಕ್ತಿಯನ್ನು ಪ್ರೋತ್ಸಾಹಿಸಿ ಆತನ ದಾಖಲೆಯ ಜಯಕ್ಕೆ ಕಾರಣರಾಗಿ.

ನಮ್ಮ ಕೈಯಲ್ಲಿರುವ ಮೇಣದ ದೀಪದಿಂದ ಬೇರೊಬ್ಬರ ಮೇಣದ ಬತ್ತಿಗೆ ಅಗ್ನಿಯನ್ನು ಸೋಕಿಸಿದರೆ ನಮ್ಮ ಕೈಯಲ್ಲಿರುವ ದೀಪ ತನ್ನ ಪ್ರಖರತೆಯನ್ನು ಕಳೆದುಕೊಳ್ಳದು. ಆದ್ದರಿಂದ ಯಶಸ್ಸಿನ ಉತ್ತುಂಗದಲ್ಲಿ ರುವವರು, ಇಲ್ಲವೇ ಯಶದ ಹಾದಿಯಲ್ಲಿ ಸಾಗುತ್ತಿರುವವರು ಬೇರೆಯವರಿಗೆ ಸಹಾಯ ಸಹಕಾರ ನೀಡಲಿ. ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಿ ಸ್ನೇಹ ಸಂಬಂಧಗಳನ್ನು ವೃದ್ಧಿಸಿಕೊಳ್ಳಲಿ.

ಅಕಸ್ಮಾತ್ ಅವರೇನಾದರೂ ನಿಮಗಿಂತ ಹೆಚ್ಚು ಬೆಳೆದುಬಿಟ್ಟರೆ ಎಂಬ ಅಸೂಯೆ ಖಂಡಿತ ಬೇಡ. ಅವರವರ ಕರ್ಮಾನುಸಾರ ಅವರವರು ಪಡೆದು ಬಂದಿರುತ್ತಾರೆ. ಇಡೀ ದೇವಾಲಯವನ್ನು ಕಟ್ಟಲು ಇಟ್ಟಿಗೆಯೊಂದನ್ನು ನಾವು ಕೊಟ್ಟೆವೆಂದ ಮಾತ್ರಕ್ಕೆ ನಾವೇ ದೇವಾಲಯ ಕಟ್ಟಿದ ನಿರ್ಮಾತೃಗಳಲ್ಲ.. ದೇವಾಲಯ ಕಟ್ಟುವ ಕೈಂಕರ್ಯದಲ್ಲಿ ನಮ್ಮದೊಂದು ಅಳಿಲುಸೇವೆಗೆ ಅವಕಾಶ ದೊರೆಯಿತೆಂಬ ಕೃತಜ್ಞತಾ ಭಾವ ನಮ್ಮಲ್ಲಿ ಮನೆ ಮಾಡಿರಲಿ.

## ಕವಿ ಮನಸು

### ನೋಡಿ ನಡೆಯೋ ತಮ್ಮಾ




ನೋಡಿ ನಡೆಯೋ ತಮ್ಮಾ
ಕಾಲಡಿ ಸಸಿ ಒಂದು ಐತೆ
ಮುಂದೆ ಬೆಳೆದು ಅದು
ನಿನ್ನುಸಿರಿಗೆ ಕಾರಣವಾಗುತ್ತೈತೆ

ಸಣ್ಣ ಸಸಿಯು ಎಂದು
ನೀನದನ ತುಳಿಯಬ್ಯಾಡ
ಹಸಿರೇ ಉಸಿರು ಎಂಬುದನ್ನು
ಎಂದಿಗೂ ಮರೆಯಬೇಡ

ತುಳಿದು ಹೋದ ಮ್ಯಾಲೆ
ಮತ್ತೆ ಬೆಳೆವುದೇನ
ನಿನಗಿರುವ ಜೀವದಂತೆ
ಅದರದೂ ಜೀವವಲ್ಲವೇನಾ

ಒಳಿತಿಗೆ ನೀನಾಗದಿದ್ದರೂ
ದುಡುಕಿ ಕೇಡು ಮಾಡಬೇಡ
ಧರೆಯೋಳು ಇರಲು ಹಸಿರು
ನಡೆದಿದೆ ನಿನ್ನ ಉಸಿರು

– ಕೆ ಎಂ ಬಸವರಾಜ ಹೊಸಪೇಟೆ

### ಕ್ವಚಿತ್ತಾದ ಭಾವ

ಬಾಳಿನ ಬಹುಪಾಲು ಕಳೆದಿರುವೆ
ಕ್ವಚಿತ್ತಾದ ನೆನಪಲಿ
ಮರಳಿ ಬಾರದ ಪಟ್ಟಿಯಲ್ಲಿ
ಸಮಯವೆಂಬ ಅಮೃತ
ನನ್ನನೆ ನಂಜಾಗಿಸಿಕೊಂಡೆಯಲ್ಲಾ ....
ಎಂದು ಗಹಗಹಿಸಿ ನಗತೊಡಗಿದೆ...
ವ್ಯಂಗ್ಯದಿ....

ಮೌನವಾಗಿ ನಿಲ್ಲದೆ ಬೇರೆ ವಿಧಿಯಿಲ್ಲ
ಕ್ವಚಿತ್ತಾದ ನೆನಪೆಂಬ ಭಾವ
ಅನಿರೀಕ್ಷಿತ......
ಬಾಳಪಯಣದ ಹಲವು
ತಿರುವಿನಲೊಂದು
ತಿರುವು ಪಡೆದ ಭಾವ ಮಾತ್ರ

ಈಗೇನಗೆ ಅದರ ಬಗೆಗೆ ಅಂಥ
ಕ್ರೋಧವಾಗಲೀ,
ದ್ವೇಷವಾಗಲೀ,
ತಾತ್ಸಾರವಾಗಲೀ ಏನೂ ಇಲ್ಲ
ಅಂತೆಯೇ ಪ್ರೀತಿ, ವಿಶ್ವಾಸವೂ ಇಲ್ಲ

– ಲೋಹಿತೇಶ್ವರಿ ಎಸ್ ಪಿ

### ನಗು

ಅಂದದ ಮೊಗಕೆ ನಗುವೇ ಭೂಷಣ
ನಕ್ಕು ನಲಿಯುತ್ತಿದ್ದರೆ ರಸದೌತಣ
ಅದಕ್ಕೇನೂ ಬೇಕಿಲ್ಲ ವೇತನ
ಅದುವೇ ಬಲ್ಲವರ ಜಾಣತನ

ಬಿಟ್ಟುಬಿಡಿ ಕೆಟ್ಟ ಹಗೆ
ಬೀರಿಬಿಡಿ ಪುಟ್ಟ ನಗೆ
ಮರೆತುಬಿಡಿ ಮನದ ಬೇಗುದಿ
ಕೊಟ್ಟುಬಿಡಿ ನಗುವಿನ ಔಷಧಿ
ನಗುವವರನ್ನು ಕಂಡು ಹೀಗಳೆಯಬೇಡಿ
'ನಕ್ಕರೆ ಅದೇ ಆರೋಗ್ಯ ' ಮರೆಯಬೇಡಿ

ಮುಖದಲ್ಲಿ ಮೂಡಿದರೆ ಮಂದಹಾಸ
ಭಾಸವಾಗುತ್ತದೆ ನೂರು ನಕ್ಷತ್ರಗಳ
ಸಮಾವೇಶ

ನಗಿಸುವುದು ಒಂದು ಕಲೆ
ಗೊತ್ತಿರಬೇಕು ಅದರ ಬೆಲೆ

– ಚೇತನ ಭಾರ್ಗವ ಬೆಂಗಳೂರು




# ರಕ್ತದೊತ್ತಡ ಗರ್ಭಿಣಿಯರ ತಪಾಸಣೆಗೆ ನಿಗಾವಹಿಸಿ

## ಡಿಹೆಚ್‌ಓ ಡಾ.ಯಲ್ಲಾ ರಮೇಶಬಾಬು ಹೇಳಿಕೆ | ತಾಯಿ ಮರಣ ತಡೆ | ಜಿಲ್ಲಾ ಆಸ್ಪತ್ರೆ ತಜ್ಞವೈದ್ಯರ ಸಮನ್ವಯ ಸಮಿತಿ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ರಕ್ತದೊತ್ತಡ, ರಕ್ತಹೀನತೆ ಕೊರತೆ ಕಂಡುಬರುವ ಗರ್ಭಿಣಿಯರನ್ನು ಗುರ್ತಿಸಿ ಅವರ ತಪಾಸಣೆಗೆ ಆದ್ಯತೆ ನೀಡಬೇಕು ಎಂದು ಅವರ ನಿಗಾವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಗರ್ಭಿಣಿಯೆಂದು ಗುರ್ತಿಸಿದ ದಿನದಿಂದ ರಕ್ತದೊತ್ತಡ, ತೂಕ, ಹೆಚ್‌ಬಿ ಪ್ರಮಾಣ, ಮೂತ್ರ ಪರೀಕ್ಷೆಗಳನ್ನು ನಿಯಮಿತವಾಗಿ ಮಾಡಿಸಬೇಕು. ಜೊತೆಗೆ ಅಧಿಕ 120/80 ಕ್ಕಿಂತ ಹೆಚ್ಚು (ಬಿಪಿ) ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶದ ಪ್ರಮಾಣ 11 ಕ್ಕಿಂತ ಕಡಿಮೆ ಇದ್ದಲ್ಲಿ ತಡಮಾಡದೇ ಕುಟುಂಬದ ಸದಸ್ಯರ ಮನವೊಲಿಸಿ ಹತ್ತಿರದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಬೇಕು. ಈ ಮೂಲಕ ತಾಯಿ ಮರಣ ತಡೆಗೆ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರು ನಿಗಾ ವಹಿಸಬೇಕು ಎಂದು ತಿಳಿಸಿದರು.

ಮಂಗಳವಾರದಂದು ಜಿಲ್ಲಾ ಆರೋಗ ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ತಾಯಿ ಮರಣ ತಡೆ ಕುರಿತು ಏರ್ಪಡಿಸಿದ್ದ ಬಿಮ್ಸ್ ಮತ್ತು ಜಿಲ್ಲಾ ಆಸ್ಪತ್ರೆಯ ತಜ್ಞವೈದರ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ



ವಹಿಸಿ ಅವರು ಮಾತನಾಡಿದರು.

ರಕ್ತದೊತ್ತಡ ಪರೀಕ್ಷೆ ಕೈಗೊಂಡ ನಂತರ ಕಂಡುಬರುವ ವ್ಯತ್ಯಾಸ ಮರು ಪರಿಶೀಲಿಸಬೇಕು. ರಕ್ತಹೀನತೆ ಕಂಡುಬಂದಲ್ಲಿ ಸ್ಥಳೀಯವಾಗಿ ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್‌ಗಳನ್ನು ಹಾಕಿಸಬೇಕು. ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ಟೆಲಿ ಕನ್ಸಲ್ಟನ್ಸಿ ಮಾಡಿಸಲು ಕ್ರಮವಹಿಸಿ, ಇಲ್ಲವೇ ತಜ್ಞರನ್ನು ನೇರವಾಗಿ ಸಂಪರ್ಕಿಸಿ ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು ಎಂದರು.

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಲು ತಿಳಿಸಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಕುರಿತು ಆರೋಗ್ಯ ಶಿಕ್ಷಣ ನೀಡಬೇಕು. ಅತಿ ಮುಖ್ಯವಾಗಿ ಗರ್ಭಿಣಿಗೆ ಮೇಲ್ಮಟ್ಟದ ಆಸ್ಪತ್ರೆಗೆ ರೇಫರ್ ಮಾಡುವಾಗ 108 ಆರೋಗ್ಯ ಕವಚ ಬರುವ ಸಮಯ ತಡವಾಗುವ ಸಾಧ್ಯತೆ ಇದ್ದಲ್ಲಿ, ತಕ್ಷಣೇ ವೈದ್ಯಾಧಿಕಾರಿಗಳು ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಇಲಿ ಜ್ವರದ ಕುರಿತು ಜಾಗೃತಿ: ಆಹಾರ ಮತ್ತು ನೀರಿನ ಸಂಗ್ರಹಗಳನ್ನು ಇಲಿಯ ಮೂತ್ರ ಅಥವಾ ಮಲ ಮಿಶ್ರಣವಾಗದಂತೆ ತಡೆಯಲು ತಿಳಿಸಿ ಎಂದರು.

ವಿಮ್ಸ್ ಪ್ರಸೂತಿ ವಿಭಾಗದ ಮುಖಸ್ಥ ಡಾ.ವಿರೇಂದ್ರ ಕುಮಾರ್ ಅವರು ಮಾತನಾಡಿ ಹಬ್ಬ, ಜಾತ್ರೆ, ಊರ ದೇವರ ಪೂಜೆ, ಮುಂತಾದ ಆಚರಣೆಯ ಮಾಡುವಾಗ ಗರ್ಭಿಣಿಯ ಸಕಾಲದಲ್ಲಿ ಆಗಬೇಕಾದ ತಪಾಸಣೆಗೆ ಅಡಚಣೆಯಾಗದಂತೆ ಪಾಲಕರ ಮನವೊಲಿಸಬೇಕು. ಗಂಡಾಂತರ ಗರ್ಭಿಣಿಯರ ಮನೆ ಭೇಟಿ ಹಾಗೂ ಆರೋಗ್ಯದ ಸ್ಥಿತಿ ಕುರಿತು ಪ್ರತಿವಾರ ಚರ್ಚಿಸಬೇಕು. ಹೆರಿಗೆ ವಿಷಯವನ್ನು ಆದ್ಯತೆ ಇಟ್ಟುಕೊಂಡು ಸ್ಥಳೀಯ ಗ್ರಾಮ ಪಂಚಾಯತ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಮನ್ವಯ ಸಭೆ ಕೈಗೊಳ್ಳಬೇಕು ಎಂದರು.

ಹೆರಿಗೆ ಪೂರ್ವದಲ್ಲಿ ಎಸ್‌ಟಿಐ, ಆರ್‌ಟಿಐ, ಹೆಚ್‌ಬಿಎಸ್‌ಎಜಿ ಪರೀಕ್ಷೆಗಳನ್ನು ತಪ್ಪದೇ ಮಾಡಿಸಬೇಕು, ಹೆರಿಗೆಗೆ ಆಗಮಿಸಿದಾಗ ಪರೀಕ್ಷೆ ಮೂಲಕ ಹೆರಿಗೆ ನಿರ್ವಹಿಲು ಸಾಧ್ಯತೆ ಅಥವಾ ಗಂಭೀರತೆ ಕಂಡುಬಂದರೆ ತಡ ಮಾಡದೆ ಸಿಬ್ಬಂದಿ ಸಹಿತ ರೇಫರ್ ಮಾಡುವುದನ್ನು ಮರೆಯಬಾರದು, ಅದಕ್ಕೆ ಪೂರಕವಾದ ವೈದ್ಯಕೀಯ ದಾಖಲಾತಿಗಳನ್ನು ಸಹ ಇರುವಂತೆ ನೋಡಿಕೊಳ್ಳಿ ಎಂದು ವಿನಂತಿಸಿದರು.

ಸಭೆಯಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ, ಬಿಮ್ಸ್ ಪ್ರಸೂತಿ ತಜ್ಞೆ ಡಾ.ಆಶಾರಾಣಿ, ಡಾ.ವಿಜಯಲಕ್ಷ್ಮೀ, ಡಾ.ಚಂದ್ರಶೇಖರ, ಡಾ. ವಾರೀಜಾ.ಟಿ, ಜಿಲ್ಲಾ ಆಸ್ಪತ್ರೆ ಪ್ರಸೂತಿ ತಜ್ಞ ಡಾ.ಅಶ್ರಫ್ ಅಲಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಕಾಯಕಲ್ಪ ಸಲಹೆಗಾರರಾದ ಡಾ.ಪ್ರಿಯಾಂಕ್, ಡಿಪಿಎಮ್ ವೆಂಕೋಬ್ ನಾಯಕ್, ಷರೀಫ್ ಉಪಸ್ಥಿತರಿದ್ದರು.

# ಸನ್ಮಾರ್ಗದ ನಡೆಗೆ ಎನ್‌ಎಸ್‌ಎಸ್ ಸಹಕಾರಿ

## ಪ್ರಾಚಾರ್ಯ ಕೆ.ಮಲ್ಲಿಕಾರ್ಜುನಗೌಡ ಹೇಳಿಕೆ | ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆ ಯಲ್ಲಿತಮ್ಮನ್ನುಸಕ್ರಿಯವಾಗಿತೊಡಗಿಸಿಕೊಂಡಾಗ ಭವಿಷ್ಯದಲ್ಲಿ ಸನ್ಮಾರ್ಗದತ್ತ ಸಾಗಲು ಸಹಕಾರಿ ಯಾಗಲಿದೆ ಎಂದು ವಿಜಯನಗರ ಮಹಾ ವಿದ್ಯಾಲಯದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೆ.ಮಲ್ಲಿಕಾರ್ಜುನಗೌಡ ಹೇಳಿದರು. ನಗರದ ವಿಜಯನಗರ ಪದವಿಪೂರ್ವ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ದಿನದ ಕಾರ್ಯ ಕ್ರಮವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಅನಾಥಶ್ರಮಗಳಿಗೆ ಭೇಟಿ ನೀಡುವ ರೂಢಿ ಬೆಳೆಸಿಕೊಳ್ಳಬೇಕು. ಅನಾಥಶ್ರಮ ಸೇರಿದಂತೆ ಸೇವೆ ಅಗತ್ಯವಿರುವ ವಿವಿಧೆಡೆ ತಮ್ಮ ಸೇವೆ ಸಲ್ಲಿಸಿ, ಸೇವಾ ಮನೋಭಾವ ಬೆಳೆಸಿಕೊಂಡಾಗ ಭವಿಷ್ಯದಲ್ಲಿ ಎದುರಾಗುವ ನಾನಾ ಒತ್ತಡಗಳಿಗೆ ಸಿಲುಕದೆ ಬದಕನ್ನು ಅರ್ಥಪೂರ್ಣವಾಗಿ ಕಳೆಯಬಹುದಾಗಿದೆ ಎಂದರು.




ಎನ್.ಎಸ್.ಎಸ್ ಅಧಿಕಾರಿ ಕೆ.ಶರಣಬಸವ ಪ್ರಾಸ್ತಾವಿಕವಾಗಿ ಮಾತನಾಡಿ, ಎನ್.ಎಸ್.ಎಸ್. ಭಾರತ ಸರ್ಕಾರದ ಯುವ ಮತ್ತು ಕ್ರೀಡಾ ವ್ಯವಹಾರಗಳ ಸಚಿವಾಲಯದ ಯೋಜನೆ ಯಾಗಿದೆ, 1969ರಲ್ಲಿ ಪ್ರಾರಂಭಿಸಲಾಯಿತು. ಎನ್‌ಎಸ್‌ಎಸ್ ವಿದ್ಯಾರ್ಥಿ ಸಮುದಾಯವನ್ನು ಸಮಾಜ ಸೇವೆಯ ಮೂಲಕ ಸಮಾಜದ ಅಭಿವೃದ್ಧಿಗೆ ಸಮರ್ಪಿಸಲು ಉದ್ದೇಶಿತವಾಗಿದೆ. ಎನ್‌ಎಸ್‌ಎಸ್ ಕಾರ್ಯಕ್ರಮವು ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಮಾಜದ ಸೇವೆಯ ಜೊತೆಗೆ ವ್ಯಕ್ತಿತ್ವದ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಇದು ವಿದ್ಯಾರ್ಥಿಗಳನ್ನು ಸಾಮಾಜಿಕ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸಲು, ಪ್ರಾತ್ಯಕ್ಷಿಕ ಸಾಮಾಜಿಕ ಕೆಲಸದ ಮೂಲಕ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತದೆ ಎಂದರು.

ಸಮಾಜಸೇವೆ ಮೂಲಕ ವ್ಯಕ್ತಿತ್ವದ ಅಭಿವೃದ್ಧಿ, ಸಮುದಾಯದ ಬಗ್ಗೆ ಜಾಗೃತಿ, ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿ ಎನ್‌ಎಸ್‌ಎಸ್‌ನ ಪ್ರಮುಖ ಉದ್ದೇಶಗಳಾಗಿವೆ. ಎನ್‌ಎಸ್‌ಎಸ್ ಸ್ವಯಂಸೇವಕರು ಸಮಾಜದ ಒಳಗಿನಿಂದಲೇ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು, ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಾರೆ ಎಂದರು.

ಕನ್ನಡ ಉಪನ್ಯಾಸಕ ಕನಕರಾಯ ಮಾತನಾಡಿ ದರು. ಎನ್ ಸಿ ಸಿ ಅಧಿಕಾರಿ ಪ್ರಭುಸ್ವಾಮಿ ಮತ್ತು ಉಪನ್ಯಾಕರಾದ ಎಚ್.ಎಂ. ನಿರಂಜನ್, ದ್ರಾಕ್ಷಾಯಿಣಿ ಕೆ ಮೈತ್ರಿ ಇತರರು ಇದ್ದರು.

# ನಿವೃತ್ತ ನೌಕರರಿಗೆ 7ನೇ ವೇತನ ಸೌಲಭ್ಯ ನೀಡುವಂತೆ ಆಗ್ರಹ



■ ಹಂಪಿ ಟೈಮ್ಸ್ ಕೊಟ್ಟೂರು

7ನೇ ವೇತನ ಆಯೋಗದ ಅನುಷ್ಠಾನದಲ್ಲಿ 2022 ಜುಲೈ 1 ರಿಂದ 2024 ಜುಲೈ 31ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೂಲ ವೇತನದ ಮೇಲೆ ಡಿ.ಸಿ.ಆರ್ ಜಿ ಕಮ್ಯುಟೇಷನ್(ಆಫ್ಸನ್) ಇಎಲ್.ಎನಕ್ಯಾಷಮೆಂಟ್ ಲೆಕ್ಕಾಚಾರ ಮಾಡಿ ನ್ಯಾಯೋಚಿತವಾಗಿ ಲಭ್ಯವಾಗುವ ಆರ್ಥಿಕ ಸೌಲಭ್ಯವನ್ನು ದೊರಕಿಸಿಕೊಡುವಂತೆ ಮುಖ್ಯ ಮಂತ್ರಿ ಅವರಿಗೆ ಆಗ್ರಹಿಸಿ ಕೊಟ್ಟೂರು ತಾಲೂಕು ನಿವೃತ್ತ ನೌಕರರ ಸಂಘವು ತಾಲೂಕು ಆಡಳಿತ ಮೂಲಕ ಮನವಿ ಪತ್ರ ಸಲ್ಲಿಸಿದರು. ಮಂಗಳವಾರ ಉಪತಹಶೀಲ್ದಾರ ಅನ್ನದಾನೇಶ ಬಿ ಪತ್ತಾರ್ ಅವರಿಗೆ ತಾಲೂಕು ನಿವೃತ್ತ ನೌಕರರ ಸಂಘದಿಂದ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ತಾಲೂಕು ನಿವೃತ್ತ ನೌಕರರ ತಾಲೂಕು ಸಂಚಾಲಕ ಈಶ್ವರಪ್ಪ ತುರುಕಾಣಿ, ಮನೋಹರಸ್ವಾಮಿ, ನಾಗರಾಜ ಕೆ ನಿವೃತ್ತ ಉಪತಹಶೀಲ್ದಾರರು, ಚಂದ್ರಶೇಖರ, ಬಸವರಾಜ, ಪಿ ಜಿ ಅಶೋಕ, ಹಾಲೇಶ, ವೆಂಕಟೇಶ, ಸೋಮನಗೌಡ ಜೆ ಬಿ, ಇತರೆ ನಿವೃತ್ತ ನೌಕರರು ಹಾಜರಿದ್ದರು.

# ದೈಹಿಕ ಸದೃಢರಾಗಲು ಕ್ರೀಡೆ ಅತೀ ಮುಖ್ಯ

## ಕೆ.ರಾಜಶೇಖರ ಹಿಟ್ನಾಳ ಹೇಳಿಕೆ | ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಪ್ರಸಕ್ತ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಉದ್ಘಾಟನಾ ಕಾರ್ಯಕ್ರಮವು ನಗರದ ಗದಗ ರಸ್ತೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 24ರಂದು ನಡೆಯಿತು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಕ್ರೀಡಾ ಧ್ವಜಾರೋಹಣ ಹಾಗೂ ಕ್ರೀಡಾ ಜ್ಯೋತಿ ಬೆಳಗಿಸಿ ದಸರಾ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿ ಹೆಚ್ಚಿನ ಸಂಖ್ಯೆಯಲ್ಲಿ ವಿಜೇತರಾಗಿ, ಮುಂದೆ ವಿಭಾಗ ಮಟ್ಟದಲ್ಲಿಯೂ ಉತ್ತಮ ಪ್ರದರ್ಶನ ನೀಡಿ, ರಾಜ್ಯ ಮಟ್ಟದಲ್ಲಿ ಕೊಪ್ಪಳ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ಹೇಳಿದರು.

ಕ್ರೀಡೆಯು ಈ ಎರಡು ದಿನಗಳಿಗೆ ಮಾತ್ರ ಸೀಮಿತವಾಗಬಾರದು, ಪ್ರತಿ ದಿನ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು. ಕೊಪ್ಪಳ ಜಿಲ್ಲೆಯ ಕ್ರೀಡಾಪಟುಗಳು ಈ ಬಾರಿ ಉತ್ತಮ ಪ್ರದರ್ಶನ



ನೀಡಿ, ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡಲಿದ್ದಾರೆ ಎಂಬ ವಿಶ್ವಾಸ ನಮಗೆ ಎಂದು ಹೇಳಿದರು.

ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಗಳಾದ ವಿಠ್ಠಲ ಜಾಬಗೌಡರ ಅವರು ಮಾತನಾಡಿ, ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಎರಡು ದಿನಗಳ ಕಾಲ ಆಯೋಜನೆ ಮಾಡಲಾಗಿದ್ದು, ಸೋಲು ಗೆಲುವು ಅನ್ನೊಂದು ಕ್ರೀಡೆಯ ಒಂದು ಅವಿಭಾಜ್ಯ ಅಂಗವಾಗಿದೆ. ಈ ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಭಾಗವಹಿಸಬೇಕು. ನಿರ್ಣಯದ ಕುರಿತು ಏನೇ ಸಮಸ್ಯೆ ಕಂಡು ಬಂದರೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ ಪರಿಹಾರ ಕಂಡುಕೊಳ್ಳವುದರ ಮೂಲಕ ಕ್ರೀಡಾಪಟುಗಳು ವಿಜೇತರಾಗಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿ ಎಂದು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಕ್ರೀಡೆಯಲ್ಲಿ ಭಾಗಿಯಾದ ಸಿಇಓ: ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾದ ಜಿಪಂ ಸಿಇಓ ರಾಹುಲ್ ರತ್ನಂ ಪಾಂಡೆಯ ಅವರು ಗುಂಡು ಎಸೆತ ಸ್ಪರ್ಧಾಳುಗಳೊಂದಿಗೆ ಆಪ್ತವಾಗಿ ಮಾತನಾಡಿ ಗುಂಡು ಎಸೆಯುವ ಮೂಲಕ ಅವರಿಗೆ ಸ್ಫೂರ್ತಿ ನೀಡಿದರು.

# ಪ್ರವಾಸಿ ಮಾರ್ಗದರ್ಶಿ ತರಬೇತಿ ಅರ್ಜಿ ಆಹ್ವಾನ

ಮೊದಲ ಪುಟದಿಂದ

ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಟ್ಟದಲ್ಲಿನ ಪ್ರವಾಸೋದ್ಯಮ ಇಲಾಖೆಯ ತಾತ್ಕಾಲಿಕ ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಅ.08ರೊಳಗಾಗಿ ಸಲ್ಲಿಸಬೇಕು.

**ಬೇಕಾದ ದಾಖಲೆಗಳು:** ಹತ್ತನೇ ತರಗತಿ ಅಂಕಪಟ್ಟಿ, ಪಿಯುಸಿ ಅಂಕಪಟ್ಟಿ, ಪದವಿ ಪೂರ್ಣಗೊಂಡಿದ್ದಲ್ಲಿ ಪದವಿ ಅಂಕಪಟ್ಟಿಗಳು, ಜಾತಿ ಮತ್ತು ಆದಾಯ ಪ್ರಮಾಣಪತ್ರ, ವಾಸ ಸ್ಥಳ ಪ್ರಮಾಣ ಪತ್ರ, ಇತ್ತೀಚಿನ ಭಾವಚಿತ್ರ.

**ಅರ್ಜಿ ಸಲ್ಲಿಸುವ ಪ್ರಕ್ರಿಯೆ:** ಅರ್ಜಿ ನಮೂನೆ ರೂ.50 ಗೆ ದೊರೆಯಲಿದ್ದು, ಅರ್ಜಿಯಲ್ಲಿ ಕೋರಲಾದ ಎಲ್ಲಾ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಬೇಕು. ಅಪೂರ್ಣ ಹಾಗೂ ಅಸ್ಪಷ್ಟ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗಧಿಪಡಿಸಿದ ಅರ್ಹತೆ ಹಾಗೂ ಮಾನದಂಡಗಳನ್ನು ಪೂರೈಸಿದ 50 ಅಭ್ಯರ್ಥಿಗಳಿಗೆ ಪಿಯುಸಿ (10+2) ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದ್ದ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಿಗೆ ಶಿಫಾರಸ್ಸು ಮಾಡಲಾಗುವುದು. ಕೇಂದ್ರ ಕಚೇರಿಯಿಂದ ಅನುದಾನ ಬಿಡುಗಡೆಯಾದ ನಂತರ ತರಬೇತಿಗೆ ನಿಯೋಜಿಸಲಾಗುವುದು. ಅರ್ಜಿಯನ್ನು ನಮೂನೆಯಲ್ಲಿಯೇ ಸಲ್ಲಿಸಬೇಕು.

**ಅರ್ಹತೆ:** ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿರಬೇಕು. ಕನಿಷ್ಠ ವಯೋಮಿತಿ 21 ವರ್ಷಗಳು, ಗರಿಷ್ಠ 45 ವರ್ಷ ಇರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ವಿಧವಾ ಮಹಿಳೆಯರಿಗೆ 48 ವರ್ಷಗಳವರೆಗೆ ವಿನಾಯಿತಿ ಇರುತ್ತದೆ. ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿರಬಾರದು. ಸರ್ಕಾರಿ ಮತ್ತು ಅರೆ ಸರ್ಕಾರಿ ಹುದ್ದೆಯಲ್ಲಿರಬಾರದು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಅಥವಾ ದೂ.08394–295640 ಗೆ ಸಂಪರ್ಕಿಸಿ.

# ಸರ್ಕಾರದ ಯೋಜನೆ ಸಾಮಾನ್ಯ ಪ್ರಜೆಗೂ ತಲುಪಿಸಿ

ಮೊದಲ ಪುಟದಿಂದ

ಯೋಜನೆಗಳು ಅರ್ಹರಿಗೆ ಸಿಗಬೇಕು. ಇಂತಹ ಕಾರ್ಯಕ್ರಮಗಳಬಗ್ಗೆಅರಿವುಅತ್ಯವಶ್ಯಕವಾಗಿದ್ದು, ಕೇಂದ್ರ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳ ಮಾಹಿತಿಯನ್ನು ಭಾರತ ಸರ್ಕಾರದ ವಾರ್ತಾ ಶಾಖೆಯ ಎಕ್ಸ್ ಖಾತೆ, ಫೇಸ್‌ಬುಕ್, ಇನ್ಸ್ಟಾಗ್ರಾಮ್ ಹಾಗೂ ವೆಬ್‌ಸೈಟ್ ಮೂಲಕ ನೀಡಲಾಗುತ್ತದೆ. ಇದರ ಸದ್ಬಳಕೆ ಯಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ರುದ್ರಾಂಭ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ವಿಜಯ ಕುಮಾರ್ ಹೇಮಪ್ಪ ಅವರು ವಹಿಸಿದ್ದರು.

ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಚಂದ್ರು ಕೊಂಚಿಗೇರಿ, ಹೂವಿನಹಡಗಲಿ ಕರ್ನಾಟಕ ಪ್ರೆಸ್ ಕ್ಲಬ್‌ನ ಅಧ್ಯಕ್ಷ ಹೆಚ್.ಸುಭಾಸಚಂದ್ರ, ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಅಧ್ಯಕ್ಷ ಪರುಶುರಾಮ, ಗಣ್ಯರಾದ ವಾರದ ಗೌಸ್, ತೋಟಾ ನಾಯಕ್, ಪರಮೇಶ್ವರ, ವೀರಸಿಂಗ್ ನಾಯಕ್, ಶಶಿಧರ್, ಹಾಲಪ್ಪ, ತೋಟಪ್ಪ ಸೇರಿದಂತೆ ಮತ್ತಿತರರಿದ್ದರು. ಕಾಲೇಜು ವಿದ್ಯಾರ್ಥಿಗಳಾದ ಅಮೃತಾ ಹಾಗೂ ಕುಸುಮಾರೆಡ್ಡಿ ಪ್ರಾರ್ಥನೆ ಗೈದರು. ಉಪನ್ಯಾಸಕರು ಕಾರ್ಯಕ್ರಮ ನಿರೂಪಿಸಿದರು. ಬಳಿಕ ನಡೆದ ಕಾರ್ಯಗಾರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪೋಷಣಾ ಅಭಿಯಾನದ ಕುರಿತು, ಹಗರಿಬೊಮ್ಮನಹಳ್ಳಿ ತಾಲೂಕು ಆಸ್ಪತ್ರೆಯ ಅಧಿಕಾರಿಗಳು ಪೋಷಣಾ ಅಭಿಯಾನ ಮತ್ತು ಮಕ್ಕಳ ಆರೈಕೆ ಕುರಿತು, ಹೂವಿನಹಡಗಲಿಯ ಕೌಶಲ್ಯ ಅಭಿವೃದ್ಧಿ ಇಲಾಖೆ ಅಧಿಕಾರಿ ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಕುರಿತು, ಹೂವಿನಹಡಗಲಿ ಎಸ್‌ಬಿಐನ ವ್ಯವಸ್ಥಾಪಕ ಯಶವಂತ್ ಕುಮಾರ್ ನಾಯ್ಕ್ ಎಲ್.ಜಿ ಪ್ರಧಾಮಮಂತ್ರಿ ಶ್ರಮ ಯೋಗಿ ಮಾನ್ ಧನ್ ಯೋಜನೆ, ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ, ಪ್ರಧಾನಮಂತ್ರಿ ಮುದ್ರಾ ಯೋಜನೆ ಮತ್ತು ಪ್ರಧಾನಮಂತ್ರಿ ಸ್ವ–ನಿಧಿಯ ಯೋಜನೆಯ ಬಗ್ಗೆ ತಿಳಿಸಿದರು.

# ಕಂಪ್ಯೂಟರ್ ಟ್ಯಾಲಿ ಉಚಿತ ತರಬೇತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ಜಿಲ್ಲಾ ಖನಿಜಾ ಪ್ರತಿಷ್ಠಾನ ಟ್ರಸ್ಟ್ ಅನುದಾನದಡಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಬಳ್ಳಾರಿಯ ಗ್ರಾಮೀಣ ಮತ್ತು ನಗರ ಪ್ರದೇಶದ ನಿರುದ್ಯೋಗಿ ಬಿ.ಕಾಂ ಪದವಿ ವಿದ್ಯಾರ್ಹತೆವುಳ್ಳ ಯುವಕ–ಯುವತಿಯರಿಗೆ ಟ್ಯಾಲಿ (ಕಂಪ್ಯೂಟರ್) ಉಚಿತ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಾಣೇಶ್ ಅವರು ತಿಳಿಸಿದ್ದಾರೆ. ಆಸಕ್ತ ಅಭ್ಯರ್ಥಿಗಳು ಸೆ.26 ರೊಳಗಾಗಿ ವೆಬ್‌ಸೈಟ್ www.ballari.nic.in ಲಿಂಕ್‌ಮುಖಾಂತರಅಭ್ಯರ್ಥಿಗಳುಹೆಸರುನೋಂದಾಯಿಸಿಕೊಳ್ಳಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ನಗರದ ನೂತನ ಜಿಲ್ಲಾಡಳಿತ ಭವನದ ಜಿಲ್ಲಾ ಕೌಶಲ್ಯಾಭಿವೃದ್ಧಿಕಚೇರಿಅಥವಾದೂ.08392–294230,ಮೊ.9964502514, 9844444958 ಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**25–09–2024 – ಬುಧವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆರ್ದ್ರ |
| ಯೋಗ | : ವರಿಯಾಣ |
| ಕರಣ | : ಕೌಳವ |
| ಸೂರ್ಯೋದಯ | : 06:17:44 |
| ಸೂರ್ಯಾಸ್ತ | : 18:18:49 |
| ರಾಹು ಕಾಲ | : 12:18–13:48 |
| ಯಮಘಂಡ ಕಾಲ | : 07:48–09:18 |
| ಗುಳಿಕ ಕಾಲ | : 10:48–12:18 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 24–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.94 ಅಡಿ |
| ಒಳ ಹರಿವು | 7980 ಕ್ಯುಸೆಕ್ |
| ಹೊರ ಹರಿವು | 10153 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.539 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1619.85 ಅಡಿ |
| ಒಳ ಹರಿವು | 3455 ಕ್ಯುಸೆಕ್ |
| ಹೊರ ಹರಿವು | 9885 ಕ್ಯುಸೆಕ್ |
| ಸಾಮರ್ಥ್ಯ | 60.905 ಟಿಎಂಸಿ |

# ಕಾಲೇಜ್ ಬಳಿ ತಂಬಾಕು ಮಾರಾಟ ಮಾಡಿದ್ರೆ ಕ್ರಮ ನಿಶ್ಚಿತ

### ಡಿಸಿ ಎಂ.ಎಸ್.ದಿವಾಕರ ಸೂಚನೆ । ತಂಬಾಕಿನಿಂದ ಮಕ್ಕಳನ್ನು ರಕ್ಷಿಸಿ




■ **ಹಂಪಿ ಟೈಮ್ಸ್ ಹೊಸಪೇಟೆ**

ತಂಬಾಕಿನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿ, ತಂಬಾಕಿನಿಂದ ಮಕ್ಕಳನ್ನು ದೂರವಿಡಲು ಜಾಗೃತಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಹಾಗೂ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೋಪ್ಟಾ ಕಾಯ್ದೆ ಸೆಕ್ಷನ್ 6 (ಬಿ) ಅಡಿಯಲ್ಲಿ ಶಾಲಾ ಕಾಲೇಜುಗಳ 100 ಗಜದ ಸುತ್ತಳತೆಯಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡಬಾರದು. ಮಾರಾಟ ಮಾಡುವುದು ಕಂಡುಬಂದರೆ ಅಂತವರ ವಿರುದ್ಧ ಸೂಕ್ತ ಕ್ರಮ ಜರುಗಿಸಿ, ದಂಡ ವಿದಿಸಬೇಕು. ಜಿಲ್ಲೆಯಲ್ಲಿ ತಂಬಾಕು ಮಾರಾಟ ಮಾಡುವ ಅಂಗಡಿಗಳ ಸಂಖ್ಯೆ ಹಾಗೂ ತಂಬಾಕು ಮಾರಾಟ ಮಾಡುವ ಅಂಗಡಿಗಳಿಗೆ ತಂಬಾಕು ಪರವಾನಿಗಿ ನೀಡಿದ ಸಂಖ್ಯೆಗಳ ಸಂಪೂರ್ಣ ವರದಿ ನೀಡಬೇಕು. ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣಗಳು, ಹೊಟೆಲ್‌ಗಳು ಮತ್ತು ರೈಲ್ವೆ ನಿಲ್ದಾಣಗಳು ಸೇರಿದಂತೆ ವಿವಿಧ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳನ್ನು ಸೇವಿಸುವವರ ವಿರುದ್ಧ ಸೂಕ್ತ ಕ್ರಮ ವಹಿಸಬೇಕು ಎಂದರು.

ಪೊಲೀಸ್ ಇಲಾಖೆಯವರು ಕೋಪ್ಟಾ ಕಾಯ್ದೆ 2003ರ ಸೆಕ್ಷನ್ 4, 5, 6ಎ, 6ಬಿ ಮತ್ತು 7ರ ಅಡಿಯಲ್ಲಿ ಪ್ರತಿ ತಿಂಗಳ ಪ್ರಕರಣಗಳನ್ನು ದಾಖಲು ಮಾಡಿ ಮಾಹಿತಿ ನೀಡಬೇಕು. ತಂಬಾಕಿನಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಖುದ್ದಾಗಿ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ತಂಬಾಕು ಉತ್ಪನ್ನಗಳ ಪಾಕೇಟ್ ಮೇಲೆ, ಅದರ ಸೇವನೆಯಿಂದ ಉಂಟಾಗುವ ಪರಿಣಾಮದ ಚಿತ್ರ ಇರಬೇಕು. ಇಲ್ಲವಾದರೆ ಆ ಉತ್ಪನ್ನಗಳ ವಿರುದ್ದ ಕಾನೂನು ಕ್ರಮ ಜರುಗಿಸಿ. ಜಿಲ್ಲೆಯಲ್ಲಿ ಬೀಡಿ ಕಟ್ಟುವ ಕಾರ್ಮಿಕರ ಸಂಖ್ಯೆ ಮತ್ತು ತಂಬಾಕು ಉತ್ಪದನ ಘಟಕಗಳ ಮಾಹಿತಿ, ಸಾರಿಗೆ ಸಂಸ್ಥೆಯ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣ ಹಾಗೂ ಘಟಕಗಳಲ್ಲಿ ಸೆಕ್ಷನ್–04 ನಾಮಫಲಕಗಳ ಅಳವಡಿಸಿರುವ ಮಾಹಿತಿ ಹಾಗೂ ದಂಡ ಸಂಗ್ರಹಿಸಿದ ವಿವರದ ವರದಿಯ ನೀಡಬೇಕು. ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನಿಗದಿತ ನಮೂನೆಯಲ್ಲಿ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್, ಸಾರಿಗೆ, ಆರೋಗ್ಯ, ಶಿಕ್ಷಣ, ಪೊಲೀಸ್, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು ಅಬಕಾರಿ ಇಲಾಖೆಗಳ ಮುಖ್ಯಸ್ಥರು ಪ್ರಕರಣಗಳನ್ನು ದಾಖಲಿಸಿದ ವಿವರ ಹಾಗೂ ದಂಡದ ಹಣ ಸಂಗ್ರಹಿಸಿದ ಮಾಹಿತಿಯನ್ನು ಜಿಲ್ಲಾ ತಂಬಾಕು ನಿಯಂತ್ರಣ ಕೋಶಕ್ಕೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತ್ ಉಪ ಕಾರ್ಯದರ್ಶಿ ಬೀಮಪ್ಪ ಲಾಳಿ, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸೂರಪ್ಪ ಡೊಂಬರಮತ್ತೂರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಎಂ.ಪಿ.ದೊಡ್ಡಮನಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಷಣ್ಮುಖ ನಾಯಕ ಸೇರಿದಂತೆ ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಪೋಷಣ ಅಭಿಯಾನ ಕಾರ್ಯಕ್ರಮ ಯಶಸ್ವಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ಸಂವಹನ ಇಲಾಖೆ, ಶಿವಮೊಗ್ಗ–ಬಳ್ಳಾರಿ, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಶಿಶು ಅಭಿವೃದ್ಧಿ ಯೋಜನೆ, ಆರೋಗ್ಯ ಇಲಾಖೆ, ಹೂವಿನಹಡಗಲಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. ವಿಜಯನಗರ. ಇವರ ಸಂಯುಕ್ತ ಆಶ್ರಯದಲ್ಲಿ ಸೆಪ್ಟಂಬರ್ 24ರಂದು ಹೂವಿನಹಡಗಲಿಯ ಪಂಚಮಸಾಲಿ ಸಮುದಾಯ ಭವನದಲ್ಲಿ ಪೋಷಣ ಅಭಿಯಾನ, ಪಿ.ಎಂ. ಸೂರ್ಯ ಘರ್ ಯೋಜನೆ, ವಿಕಸಿತ ಭಾರತ ಬಜೆಟ್. ಹೊಸ ಕ್ರಿಮಿನಲ್ ಕಾನೂನುಗಳು ಹಾಗೂ ಪಿ.ಎಂ ದೂರದರ್ಶಿತ್ವ–2047, ಛಾಯಾಚಿತ್ರ ಪ್ರದರ್ಶನ ಹಾಗೂ ವಿಶೇಷ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಹೂವಿನಹಡಗಲಿ ವಿಧಾನಸಭಾ ಕ್ಷೇತ್ರದ ಶಾಸಕ ಕೃಷ್ಣನಾಯ್ಕ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಇತ್ತಿಚಿನ ದಿನಗಳಿಗೆ ಹೊಂದಿಕೊಳ್ಳುವ ಹಾಗೆ ಯೋಜನೆಗಳನ್ನು ರೂಪಿಸಿದೆ. ಅವುಗಳನ್ನು ಸಾರ್ವಜನಿಕರು ಸರಿಯಾಗಿ ಸದುಪಯೋಗ ಪಡಿಸಿಕೊಳ್ಳಬೇಕು. ಕೇಂದ್ರ ಸರ್ಕಾರದ ಯೋಜನೆಯಾದ ಪಿ.ಎಂ. ಸೂರ್ಯ ಘರ್ ಯೋಜನೆಯೂ ಭಾರತದ ಮನೆಗಳಿಗೆ ಉಚಿತ ವಿದ್ಯುತ್ ಒದಗಿಸುವ ಗುರಿಯನ್ನು ಹೊಂದಿರುವ ಯೋಜನೆಯಾಗಿದೆ. ಈ ಯೋಜನೆ ಅಡಿಯಲ್ಲಿ ಮನೆಗಳಿಗೆ ಛಾವಣಿ ಮೇಲೆ ಸೌರ ಫಲಕಗಳನ್ನು ಸ್ಥಾಪಿಸಲು ಸಹಾಯಧನವನ್ನು ಒದಗಿಸಲಾಗುತ್ತದೆ. ನೊಂದವರಿಗೆ ನ್ಯಾಯಾ ಒದಗಿಸುವುದು ಈ ಕಾನೂನುಗಳ ಮುಖ್ಯ ಉದ್ದೇಶವಾಗಿದೆ. ಇವುಗಳಿಂದ ಅಪರಾದ ಪ್ರಕರಣಗಳನ್ನು ತಡೆಯಬುಹುದು. ಇದಲ್ಲದೆ ಪಿಎಂ ಕಿಸಾನ್, ಕಿಸಾನ್ ಸನ್ಮಾನ್, ಆಯುಷ್ಮಾನ್ ಭಾರತ್, ಅಟಲ್ ಪಿಂಚಣಿ ಯೋಜನೆ, ಹೀಗೆ ಅನೇಕ ಮಹತ್ವದ ಯೋಜನೆಗಳನ್ನು ಕೇಂದ್ರ ಸರ್ಕಾರವು ಸಾರ್ವಜನಿಕರ ಹಿತದೃಷ್ಠಿಯಿಂದ ರೂಪಿಸಿದೆ. ಅವುಗಳನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರು ಕೊಂಚಿಗೇರಿ, ಹೂವಿನಹಡಗಲಿ ಕರ್ನಾಟಕ ಪ್ರೆಸ್ ಕ್ಲಬ್‌ನ ಅಧ್ಯಕ್ಷ ಹೆಚ್.ಸುಭಾಸಚಂದ್ರ, ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಅಧ್ಯಕ್ಷ ಪರುಶುರಾಮ, ವಾರದ ಗೌಸ್,ತೋಟಾ ನಾಯಕ್, ಪರಮೇಶ್ವರ, ವೀರಸಿಂಗ್ ನಾಯಕ್, ಶಶಿಧರ್, ಹಾಲಪ್ಪ, ತೋಟಪ್ಪ ಉಪಸ್ಥಿತರಿದ್ದರು.

# ಪರಿಶಿಷ್ಟ ಅಹವಾಲುಗಳಿಗೆ ಸ್ಪಂದಿಸಿ

### ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ । ಪರಿಶಿಷ್ಟ ಸಮುದಾಯ ಕುಂದು ಕೊರತೆ ಸಭೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ಸಮುದಾಯದವರ ಅಹವಾಲುಗಳಿಗೆ ವಿವಿಧ ಇಲಾಖೆಯ ಅಧಿಕಾರಿಗಳು ಕಡೆಗಣಿಸದೇ ತಕ್ಷಣ ಸ್ಪಂದಿಸಿ, ಸಮಸ್ಯೆಗೆ ತ್ವರಿತ ಪರಿಹಾರ ಒದಗಿಸಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನತೆಯ ಸಮಸ್ಯೆಗಳು, ಸಮಸ್ಯೆಗಳ ಪರಿಹರಿಸುವಿಕೆ, ಕಾನೂನಿನ ತಿಳುವಳಿಕೆಯನ್ನು ಮೂಡಿಸುವುದು ಈ ಸಭೆಯ ಉದ್ದೇಶವಾಗಿದೆ ಎಂದರು.

ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಬಗ್ಗೆ ಸಮಗ್ರವಾದ ಅರಿವನ್ನು ಮೂಡಿಸಿ, ಆ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರನ್ನು ಜಾಗೃತಗೊಳಿಸುವ ಉದ್ದೇಶ ವನ್ನಿಟ್ಟುಕೊಂಡು ಸಭೆಯನ್ನು ನಡೆಸಲಾಗುತ್ತಿದ್ದು, ಸಭೆಯ ಮೂಲಕ ತಮ್ಮ ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹೇಳಿಕೊಳ್ಳುವ ಮೂಲಕ ಸಮಸ್ಯೆ ಬಗೆಹರಿಸುವಿಕೆಗೆ ಎಲ್ಲರೂ ಸಹಕರಿಸಬೇಕು ಎಂದರು.

ಜಿಲ್ಲೆಯಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಲಾಗಿದೆ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತ್ರೈಮಾಸಿಕ ಸಭೆ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ ಪರಿಶಿಷ್ಟರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಶೌಚಾಲಯ ಸೇರಿ ಇತರೆ ಸೌಲಭ್ಯಗಳನ್ನು ಮೊದಲ ಆದ್ಯತೆಯಾಗಿ ಪರಿಗಣಿಸಲಾಗುವುದು. ಅವುಗಳನ್ನು ಸ್ಥಳೀಯ ಶಾಸಕರ ಸಹಕಾರದ ಮೇರೆಗೆ ಹಂತ–ಹಂತವಾಗಿ ಪರಿಹರಿಸಲಾಗುವುದು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ದೌರ್ಜನ್ಯ, ಜಾತಿನಿಂದನೆ ಹಾಗೂ ಇತರೆ ಪ್ರಕರಣಗಳು ವರದಿ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಕುಂದು–ಕೊರತೆಗಳಿದ್ದರೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಬೇಕು ಎಂದರು.

ಸ್ಮಶಾನ ಭೂಮಿ, ಬಗರ್‌ಹುಕುಂ ರೈತರ ಸಮಸ್ಯೆಗಳು ಕಂದಾಯ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಸರ್ಕಾರಿ ಅಭಿಲೇಖಾಲಯ ಕಾರ್ಯಾಲಯದಲ್ಲಿ ಕಳೆದ 15 ವರ್ಷದ ಹಿಂದಿನ ಜಮೀನಿಗೆ ಸಂಬಂಧಿಸಿದ ದಾಖಲೆ ಕೇಳಿದರೆ, ಸಿಗುವುದಿಲ್ಲ ಎಂದು ಸಮಜಾಯಿಷಿ ಹಿಂಬರಹ ನೀಡಿ ಕಳುಹಿಸುತ್ತಾರೆ ಎಂದು ದಲಿತ ಸಂಘದ ಮುಖಂಡರೊಬ್ಬರು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಕೂಡಲೇ ಸಮದ್ಯಾತ್ಮಕ ಗ್ರಾಮಗಳಲ್ಲಿನ ತೊಂದರೆ ಸರಿಪಡಿಸಲು ಕ್ರಮವಹಿಸಬೇಕು ಎಂದು ಬಳ್ಳಾರಿ ತಾಲ್ಲೂಕು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಮತ್ತು ಪೊಲೀಸ್ ಇಲಾಖೆಯಿಂದ ನಿಯಮಿತವಾಗಿ ಸಭೆ ನಡೆಸಬೇಕು. ಸ್ಮಶಾನ ಭೂಮಿ, ವಸತಿ, ಶಿಕ್ಷಣ ಈ ಮೂರು ಪರಿಶಿಷ್ಟರ ಪ್ರಮುಖ ಸಮಸ್ಯೆಗಳಾಗಿದ್ದು, ಇವುಗಳ ನಿವಾರಣೆಗೆ ಅಧಿಕಾರಿಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕು. ಪರಿಶಿಷ್ಟ ಜಾತಿ ಹಾಗೂ ಸಮುದಾಯದವರ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಮತ್ತು ಇತರೆ ಸಮಸ್ಯೆಗಳ ಬಗ್ಗೆಯೂ ಗಮನಹರಿಸಿ ಎಂದು ದಲಿತ ಮುಖಂಡರು ಒತ್ತಾಯಿಸಿದರು.

ಹಲವು ದಿನಗಳಿಂದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪರಿಶಿಷ್ಟರ ಸಮುದಾಯದ ಕುಂದುಕೊರತೆಗಳ ಬಗ್ಗೆ ಅಧಿಕಾರಿಗಳ ಸಭೆ ನಡೆದಿದ್ದಿಲ್ಲ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸಭೆ ಆಯೋಜಿಸಿರುವುದು ಪ್ರಶಂಸನೀಯವಾಗಿದೆ ಎಂದು ದಲಿತ ಮುಖಂಡರು ಅಭಿನಂದನೆ ತಿಳಿಸಿದರು.

ಸಭೆಯಲ್ಲಿ ವಿವಿಧ ಸಮಸ್ಯೆಗಳನ್ನು ಆಲಿಸಿದ ಡಿಸಿ ಮಿಶ್ರಾ ಸಂಬಂಧಿಸಿದ ಅಧಿಕಾರಿ ಗಳೊಡನೆ ಚರ್ಚಿಸಿ ತ್ವರಿತ ಪರಿಹಾರ ಒದಗಿಸಲು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ದಲಿತ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಮಾಜದ ಮುಖಂಡರು ಇತರರಿದ್ದರು.

# ಸೆಪ್ಟಂಬರ್ 26ರಂದು ನಗರದಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

33/11ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೆಂಟೆನೆನ್ಸ್ ವರ್ಕ್ ಮತ್ತು ಇತರೆ ದುರಸ್ತಿ ಕಾರ್ಯ ಇರುವುದರಿಂದ ಸೆಪ್ಟೆಂಬರ್ 26ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬಾರಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅಂದು 33/11 ಕೆವಿ ವಿದ್ಯುತ್ ಕೇಂದ್ರ ವ್ಯಾಪ್ತಿಗೆ ಒಳ ಪಡುವ ಸುತ್ತ ಮುತ್ತಲಿನ ಪ್ರದೇಶಗಳಾದ ಬಸವೇಶ್ವರ ಬಡಾವಣೆ, ಜಬ್ಬಲ್ ಸರ್ಕಲ್, ಶಾನಬಾಗ ಸರ್ಕಲ್, ರಾಜೀವ್ ನಗರ, ರೈಲ್ವೆ ಸ್ಟೇಷನ್, ಅಮರಾವತಿ, ಚಿತ್ತವಾಡಗಿ, ಶುಗರ್ ಫ್ಯಾಕ್ಟ್ರಿ, ಹಂಪಿ ರೋಡ್, ಗಣೇಶಗುಡಿ, ಬಸವನದುರ್ಗ, ನಾಗೇನಹಳ್ಳಿ ಹಾಗೂ ನರಸಾಪುರ ಬಾಗದ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು, ಗ್ರಾಹಕರು ಸಹಕರಿಸಬೇಕು ಎಂದು ತಿಳಿಸಿದ್ದಾರೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ನಾನೇನು ಕಲಿತಿದ್ದೇನೆ - 1

**I ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :** 2 x 1 = 2

1) 15 ಮತ್ತು 20 ರ ಲ.ಸಾ.ಅ 60 ಆದರೆ ಆ ಸಂಖ್ಯೆಗಳ ಮ.ಸಾ.ಅ. ಕಂಡುಹಿಡಿಯಿರಿ

a) 40  b) 5  c) 30  d) 15

2) ಬಹುಪದೋಕ್ತಿ $7x^4 + 25x^8 - 9x^5 + 7$ ಬಹುಪದೋಕ್ತಿಯ ಮಹತ್ತಮ ಘಾತ (ಡಿಗ್ರಿ) ಬರೆಯಿರಿ.

a) 4  b)6  c)8  d) 5

**II ಒಂದು ಅಂಕದ ಪ್ರಶ್ನೆಗಳು :** 2 x 1 = 2

3) ಎರಡು ಚರಾಕ್ಷರವುಳ್ಳ ಸಮೀಕರಣಗಳ ಅನುಪಾತಗಳ ಹೋಲಿಕೆ $\frac{a1}{a2} \neq \frac{b1}{b2}$ ಆಗಿದ್ದರೆ ಅವುಗಳು ಹೊಂದಿರಬಹುದಾದ ಪರಿಹಾರಗಳ ಸಂಖ್ಯೆಯನ್ನು ಬರೆಯಿರಿ.

4) ಅಂಕಗಣಿತದ ಮೂಲ ಪ್ರಮೇಯವನ್ನು ಬರೆಯಿರಿ.

**III ಎರಡು ಅಂಕದ ಪ್ರಶ್ನೆಗಳು :** 3 x 2 = 6

5) $2+\sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

6) $5x + 2y = 10$
$3x - 2y = 2$ ಬಿಡಿಸಿರಿ

7) ಕ್ರಮವಾಗಿ $\frac{1}{4}$, -1 ನ್ನು ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವಾಗಿ ಹೊದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

**IV ಮೂರು ಅಂಕದ ಪ್ರಶ್ನೆಗಳು :** 2 x 3 = 6

8) ಬಹುಪದೋಕ್ತಿ $6x^2 - 3 - 7x$ ನ ಶೂನ್ಯತೆಗಳನ್ನು ಕಂಡು ಹಿಡಿಯಿರಿ ಹಾಗೂ ಶೂನ್ಯತೆಗಳ ಮೊತ್ತ ಮತ್ತು ಗುಣಲಬ್ಧ ತಾಳೆ ನೋಡಿ

9) ಎರಡು ಸಂಖ್ಯೆಗಳ ವ್ಯತ್ಯಾಸ 26 ಮತ್ತು ಒಂದು ಸಂಖ್ಯೆಯು ಇನ್ನೊಂದರ ಮೂರರಷ್ಟಿದೆ. ಅವುಗಳನ್ನು ಕಂಡುಹಿಡಿಯಿರಿ.

**V ನಾಲ್ಕು ಅಂಕದ ಪ್ರಶ್ನೆ :** 1 x 4 = 4

10) $2x + y = 8$
$x + y = 5$
ಸಮೀಕರಣಗಳನ್ನು ನಕ್ಷಾ ವಿಧಾನದ ಮೂಲಕ ಬಿಡಿಸಿ

### ನಾನೇನು ಕಲಿತಿದ್ದೇನೆ - 2

**I ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :** 2 x 1 = 2

1) 30 ಮತ್ತು 40 ಇವುಗಳ ಲ.ಸಾ.ಅ. ಮತ್ತು ಮ.ಸಾ.ಅ. ಗಳ ಗುಣಲಬ್ಧ ------------------

a) 10  b) 120  c) 1200  d) 30

2) ಎರಡು ರೇಖಾತ್ಮಕ ಸಮೀಕರಣಗಳು ಅವಲಂಬಿತ ಸ್ಥಿರ ಜೋಡಿಗಳಾಗಿದ್ದಾಗ ಅವು ಹೊಂದಿರುವ ಪರಿಹಾರಗಳು

a) ಅನನ್ಯ b) ಯಾವುದೇ ಪರಿಹಾರವಿಲ್ಲ c) ಅಪರಿಮಿತ d) 4

**II ಒಂದು ಅಂಕದ ಪ್ರಶ್ನೆಗಳು :** 2 x 1 = 2

3) ಬಹುಪದೋಕ್ತಿಯ ಡಿಗ್ರಿ ಎಂದರೇನು?

4) 3003 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ವ್ಯಕ್ತಪಡಿಸಿ.

**III ಎರಡು ಅಂಕದ ಪ್ರಶ್ನೆಗಳು :** 3 x 2 = 6

5) $x + y = 8$ ಮತ್ತು $x - y = 2$ ಸಮೀಕರಣಗಳನ್ನು ವರ್ಜಿಸುವ ವಿಧಾನದಿಂದ ಬಿಡಿಸಿರಿ.

6) $7 - \sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

7) ಕ್ರಮವಾಗಿ 6 ಮತ್ತು 5 ಶೂನ್ಯತೆಗಳ ಮೊತ್ತ ಮತ್ತು ಗುಣಲಬ್ಧವಾಗಿರುವ ವರ್ಗಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

**IV ಮೂರು ಅಂಕದ ಪ್ರಶ್ನೆಗಳು :** 2 X 3 = 6

8) $\sqrt{7}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

9) ಒಂದು ಭಿನ್ನರಾಶಿಯ ಅಂಶ ಮತ್ತು ಛೇದಗಳೆರಡಕ್ಕೆ 1 ನ್ನು ಸೇರಿಸಿದರೆ $\frac{1}{2}$ ಆಗುತ್ತದೆ ಮತ್ತು ಅಂಶ ಮತ್ತು ಛೇದಗಳೆರಡರಿಂದಲೂ 1 ನ್ನು ಕಳೆದರೆ $\frac{1}{3}$ ಆಗುತ್ತದೆ. ಹಾಗಾದರೆ ಆ ಭಿನ್ನರಾಶಿಯನ್ನು ಕಂಡುಹಿಡಿಯಿರಿ.

**V ನಾಲ್ಕು ಅಂಕದ ಪ್ರಶ್ನೆ :** 1 x 4 = 4

10) $2x + y = -2$
$x + y = 1$
ಪರಿಹಾರವನ್ನು ನಕ್ಷಾ ವಿಧಾನದ ಮೂಲಕ ಕಂಡುಹಿಡಿಯಿರಿ.

**ನಿನ್ನ ಏಳಿಗೆಗೆ ನೀನೆ ಶಿಲ್ಪಿ । ಗುರಿ ತಲುಪುವವರೆಗೆ ಪರಿಶ್ರಮ ನಿರಂತರವಾಗಿರಲಿ**

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055